೧. ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2002.

೨. 2002ನೇ ಸಾಲಿನ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) (ಕರ್ನಾಟಕ ತಿದ್ದುಪಡಿ) ವಿಧೇಯಕ.

ಇಷ್ಟು ಮಾತ್ರ ಓದಲಿಕ್ಕೆ ತಾವು ಏಕೆ ಅಡ್ಡಿ ಮಾಡಿದಿರಿ? ನಾನು ಇದನ್ನು ಇಲ್ಲಿ ಓದಿರದಿದ್ದರೆ it was a lapse on my part.

(ಗೊಂದಲ)

ಅಧ್ಯಕ್ಷರು:- ಯಾರಾದರೂ ಒಬ್ಬರು ಮಾತನಾಡಿ.

(ಗೊಂದಲ)

ಅಧ್ಯಕ್ಷರು- ಎಲ್ಲರೂ ಒಟ್ಟಿಗೇ ಮಾತನಾಡಿದರೆ, ಇಲ್ಲಿ ಬರೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಯಾರಾದರೂ ಒಬ್ಬರು ಮಾತನಾಡಿ. ಮಾನ್ಯ ಗುರುಸ್ವಾಮಿ ಅಥವಾ ಮಾನ್ಯ ನೀಲಕಂಠಪ್ಪ ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಮಾತನಾಡಿ. ಎಲ್ಲರೂ ಎಲ್ಲಿ ಮಾತನಾಡುವುದಕ್ಕಾಗುತ್ತದೆ?

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ನಾನು ಹೇಳುವುದನ್ನು ಕೇಳಿ. ನೋಟೀಸ್‌ಗೆ ಸಿಗ್ನೇಚರ್ ಹಾಕಿರುವವರ ಪೈಕಿ ಮಾನ್ಯ ನೀಲಕಂಠಪ್ಪನವರು, ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಗುರುಸ್ವಾಮಿಯವರು ಇದ್ದಾರೆ. ಮೂವರಲ್ಲಿ ಯಾರಾದರೂ ಒಬ್ಬರು ಮಾತನಾಡಿ. ಮಾನ್ಯ ನೀಲಕಂಠಪ್ಪನವರೇ, ಮೊದಲಿಗೆ ತಾವೇ ಮಾತನಾಡಿ. I have allowed Mr. Neelakantappa to speak. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಯಾರು ಸೈನ್ ಹಾಕಿದ್ದಾರೋ ಅವರಿಗೆಲ್ಲಾ ಅವಕಾಶ ಮಾಡಿಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ಯಾರಾದರೂ ಒಬ್ಬರು ಮಾತನಾಡಿ, ಎಲ್ಲರೂ ಏಕೆ ನಿಂತುಕೊಳ್ಳುತ್ತೀರಿ?

3. ನಿಯಮ 69ರ ಮೇರೆಗೆ:-

ಅ) ಕೇಂದ್ರ ಸರ್ಕಾರವು, ಕೇಂದ್ರ ಮತ್ತು ಬಿ.ಜೆ.ಪಿ. ನಾಯಕರುಗಳಿಗೆ ಪೆಟ್ರೋಲ್ ಬಂಕ್, ಅಡಿಗೆ ಅನಿಲ ಮತ್ತು ಸೀಮೆಎಣ್ಣೆ ಇತ್ಯಾದಿಗಳ ವಿತರಣೆಗೆ ಲೈಸೆನ್ಸ್ ಮಂಜೂರಾಗಿರುವುದರ ಬಗ್ಗೆ.

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ):- ಮಾನ್ಯ ಅಧ್ಯಕ್ಷರೆ, ಇಡೀ ರಾಷ್ಟ್ರದಲ್ಲಿ ತಲ್ಲಣಗೊಳಿಸುವಂತಹ ಸಾವಿರಾರು ಕೋಟ್ಯಾಂತರ ರೂಪಾಯಿಗಳ ಬಹು ಕೋಟಿ ಹಗರಣವನ್ನು ಬಿ.ಜೆ.ಪಿ. ನಾಯಕರುಗಳು, ಭಜರಂಗ ದಳದ ಕಾರ್ಯಕರ್ತರು ಮತ್ತು ಆರ್.ಎಸ್.ಎಸ್. ಕಾರ್ಯಕರ್ತರು ಮತ್ತು ಅವರ ಬೆಂಬಲಿಗರು ಈ ದೇಶದ ಹಣವನ್ನು ಲೂಟಿ ಹೊಡೆಯುವಂತಹ ಕೆಲಸವನ್ನು .....

(ಗೊಂದಲ)

ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಯಾವ ಪ್ರಾವಿಷನ್ ಅಡಿಯಲ್ಲಿ ಯಾವ ವಿಷಯದ ಮೇಲೆ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ?....

(ಗೊಂದಲ)

ಅಧ್ಯಕ್ಷರು:- ಅವರು ಹೇಳುವವರೆಗೂ ಕೇಳಿ. ನಿಯಮ 69 ಮೂಲಕ ಅವರು ಪ್ರಸ್ತಾಪಿಸುತ್ತಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದು ಸೆಂಟ್ರಲ್ ಸಬ್ಜೆಕ್ಟ್, ಕೆರೋಸಿನ್, ಪೆಟ್ರೋಲ್ ಬಂಕ್.... ಯಾವ ವಿಷಯ...

ಅಧ್ಯಕ್ಷರು:- ಒಂದು ನಿಮಿಷ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಶೆಟ್ಟರ್‌ರವರು ಇದು ಸೆಂಟ್ರಲ್ ಸಬ್ಜೆಕ್ಟ್ ಎಂದು ಹೇಳುತ್ತಿದ್ದಾರೆ. ತಾವು ಕೊಟ್ಟಿರುವ ನೋಟೀಸ್ ಆದರೂ ಏನು? ಇದು ಸೆಂಟ್ರಲ್ ಸಬ್ಜೆಕ್ಟ್ ಆಗಿರಬಹುದು. ಆದರೆ ಕೆರೋಸಿನ್ ಮತ್ತು ಪೆಟ್ರೋಲ್ ಇಲ್ಲಿ ನಿಂತು ಹೋದರೆ ನಾಳೆ ನಮ್ಮ ಕನ್‌ಸ್ಯೂಮರ್ಸ್‌ಗೆ ತೊಂದರೆಯಾಗುತ್ತದೆ ಎಂದು ತಾವು ನೋಟೀಸ್ ಕೊಟ್ಟಿದ್ದೀರಿ. ಅದನ್ನು ಹೇಳುವುದಕ್ಕಾದರೂ.....

ಶ್ರೀ ಜಗದೀಶ್ ಶೆಟ್ಟರ್:- ಅವರು ಆ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಮಾತನಾಡಲಿ. ಅಲ್ಲಿ ಕಾಂಗ್ರೆಸ್ ಎಂ.ಪಿ.ಗಳು ಇದ್ದಾರೆ. ಅವರು ಅಲ್ಲಿ ಇದನ್ನು ಪ್ರಸ್ತಾಪಿಸಲಿ. ಇಲ್ಲೇನಿದೆ ಅವರ ಕೆಲಸ?....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ.

(ಗೊಂದಲ)

ಅಧ್ಯಕ್ಷರು:- ಅವರು ಇನ್ನೂ ರೈಸೇ ಮಾಡಿಲ್ಲವಲ್ಲಾ. They have not raised.....

(ಗೊಂದಲ)

ಶ್ರೀ ಕರಿಯಣ್ಣ:- ..... ಪ್ರಜಾವಾಣಿ, ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಎಲ್ಲಾ ಬಂದಿದೆ. ಅದು ಏನೆಂದರೆ, ನಮ್ಮ ರಾಜ್ಯದ ಅನೇಕ ಮುಖಂಡರುಗಳಿಗೆ ಪೆಟ್ರೋಲ್ ಬಂಕ್ ಮಂಜೂರಾಗಿದೆ. ಅವರು ಇದನ್ನು ತೆಗೆದುಕೊಂಡಿದ್ದಾರೆ ಎಂದು ವರದಿಯಾಗಿದೆ.

(ಗೊಂದಲ)

ಇಲ್ಲಿರತಕ್ಕಂಥ ರಾಜ್ಯದ ಮುಖಂಡರುಗಳಲ್ಲಿ ಕೆಲವರಿಗೆ ಈ ಪೆಟ್ರೋಲ್ ಬಂಕ್ ಮಂಜೂರಾಗಿರುವುದರಿಂದ, ಇವರು ಈ ಅತ್ಯಲ್ಪ ಅವಧಿಯಲ್ಲಿ ಈ ಪೆಟ್ರೋಲ್ ಬಂಕ್‌ಗಳನ್ನು ಮಂಜೂರು ಮಾಡಿಕೊಂಡು ಜನಗಳ ಬಗ್ಗೆ....

(ಗೊಂದಲ)

ಇಂತಹ ನಾಯಕರುಗಳು ಇವತ್ತು ಈ ರಾಜ್ಯದಲ್ಲಿ ಒಂದು ಅಲ್ಪಾವಧಿಯಲ್ಲೇ ಪೆಟ್ರೋಲ್ ಬಂಕ್‌ಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳತಕ್ಕದ್ದು ಈ ಪತ್ರಿಕೆಗಳಲ್ಲಿ ಬಂದಿದೆ....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ..... ಅವರು ಏನೆಂದು ನೋಟೀಸ್ ಕೊಟ್ಟಿದ್ದಾರೆ?

ಅಧ್ಯಕ್ಷರು:- ನೋಟೀಸ್‌ನ ಕಾಪಿಯೊಂದನ್ನು ಅವರಿಗೆ ಕೊಡಿ.

(ಗೊಂದಲ)

ಶ್ರೀ ಕರಿಯಣ್ಣ:- ..... ಪತ್ರಿಕೆಯಲ್ಲಿ ಬಂದಿರುವುದು ಸತ್ಯವೋ, ಅಸತ್ಯವೋ? ನಮ್ಮ ನಾಯಕರುಗಳಿಗೆ ಅಗೌರವವಾಗಿದೆ, ಇದು ಅಸತ್ಯ ಇದ್ದರೆ ಅಸತ್ಯ ಎಂದು ಅವರು ಹೇಳಲಿ. ಸತ್ಯ ಇದ್ದರೆ ಇದು ಸತ್ಯ ಎಂದು ಅವರು ಒಪ್ಪಿಕೊಳ್ಳಲಿ....

(ಗೊಂದಲ)

ಅಧ್ಯಕ್ಷರು:- ಪ್ಲೀಸ್ ಒಬ್ಬೊಬ್ಬರಾಗಿ ಮಾತನಾಡಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೇ, I am on a point of order.

(ಗೊಂದಲ)

ಅಧ್ಯಕ್ಷರು:- ಅವರು ಸಬ್ಜೆಕ್ಟ್ ಅನ್ನೇ ಇನ್ನೂ ಮೂವ್ ಮಾಡಿಲ್ಲ. They have not moved the subject at all. 8-10 ಜನ ಮಾತನಾಡಿರುವುದರಿಂದ ಸಬ್ಜೆಕ್ಟ್ ಏನು ಎಂಬುದನ್ನು ಅವರು ಬರೆದುಕೊಂಡಿಲ್ಲ. They have not moved the subject at all.

(ಗೊಂದಲ)

ಅಧ್ಯಕ್ಷರು:- ಎಲ್ಲರೂ ಮಾತನಾಡುತ್ತಿದ್ದಾರೆ, Please don't take down.

(ಗೊಂದಲ)

ಅಧ್ಯಕ್ಷರು:- ಏನೂ ಕೇಳಿಸುತ್ತಿಲ್ಲ, ಎಲ್ಲರೂ ಕುಳಿತುಕೊಳ್ಳಿ. ಅವರು point of order ರೈಸ್ ಮಾಡಿದ್ದಾರೆ.

(ಗೊಂದಲ)

ಶ್ರೀ ಕರಿಯಣ್ಣ:- ನಾವು ಇನ್ನೂ ಶುರುವೇ ಮಾಡಿಲ್ಲ. point of order ಹೇಗೆ ಬರುತ್ತದೆ?

(ಗೊಂದಲ)

ಅಧ್ಯಕ್ಷರು:- ಅವರು point of order ರೈಸ್ ಮಾಡಿದ್ದಾರೆ?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಸಾರ್ ನಾವು point of order ಹೇಳುತ್ತಿದ್ದೇವೆ....

(ಗೊಂದಲ)

ಅಧ್ಯಕ್ಷರು:- ಅವರು point of order ರೈಸ್ ಮಾಡಿದ್ದಾರೆ. ಅದೇನು ಎಂಬುದನ್ನು ನೋಡೋಣ. Let us see.

(ಗೊಂದಲ)

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ತಾವು ಕುಳಿತುಕೊಳ್ಳಿ. Point of order ರೈಸ್ ಮಾಡುವುದಕ್ಕೂ ಅವಕಾಶ ಮಾಡಿಕೊಡುವುದಿಲ್ಲ ಎನ್ನುವುದಾದರೆ, ಇದ್ಯಾವ ಲೆಕ್ಕಾಚಾರ? ಅವರು Point of order ಮಾತ್ರ ರೈಸ್ ಮಾಡಿದ್ದಾರೆ, ಸಬ್ಜೆಕ್ಟ್ ಅಲ್ಲ.

(ಗೊಂದಲ)

ಅಧ್ಯಕ್ಷರು:- ಏನಿದು, ಹೇಳಿದ ಮಾತು ಕೇಳುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಧರಣಿ ನಿರತ ಶಾಸಕರುಗಳು ಸದನದ ಬಾವಿಯಿಂದ ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು:- ಇದೇನು ವಿಧಾನ ಸಭೆನೋ ಅಥವಾ ಸಂತೇನೋ, ಜಾತ್ರೆನೋ; ಇವರಿಗೆ ಅರ್ಥನೇ ಆಗುವುದಿಲ್ಲ. They are not opposing. They are raising a point of Order. ಕಾಗೋಡು ತಿಮ್ಮಪ್ಪನವರೇ, ಅವರು ನಿಯಮ 69ರ ಅಡಿಯಲ್ಲಿ ವಿಷಯ ಎತ್ತಿದ್ದಾರೆ. ಅವರು ವಿಷಯ ಹೇಳಿದ ಮೇಲೆ ನೀವು ರೈಸ್ ಮಾಡಿ. ಈಗ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಯಾವ ವಿಚಾರದಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ?

(ಗೊಂದಲ)

ಅಧ್ಯಕ್ಷರು:- ಈಗ ಸದನವನ್ನು 15 ನಿಮಿಷ ಮುಂದೂಡುತ್ತಿದ್ದೇನೆ. ನಾಯಕರೆಲ್ಲಾ ನನ್ನ ಕೊಠಡಿಗೆ ಬನ್ನಿ.

(ವಿರೋಧ ಪಕ್ಷದ ಸದಸ್ಯರು ಬಾವಿಯಲ್ಲಿ ಬಂದು ಘೋಷಣೆಗಳನ್ನು ಕೂಗುತ್ತಿದ್ದರು. ಆಡಳಿತ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತು ಘೋಷಣೆಗಳನ್ನು ಕೂಗುತ್ತಿದ್ದರು)

(ಸದನವು 10.43ಕ್ಕೆ ಮುಂದೂಡಲ್ಪಟ್ಟು ಮತ್ತೆ 15 ನಿಮಿಷದ ನಂತರ ಸೇರಲು ನಿರ್ಧರಿಸಿತು)

(3) ನಿಯಮ 69ರ ಮೇರೆಗೆ - (ಮುಂದುವರೆದ ಚರ್ಚೆ)

(ಸದನವು ಪುನಃ ಬೆಳಿಗ್ಗೆ 11.40 ಗಂಟೆಗೆ ಸಮಾವೇಶಗೊಂಡಿತು)

(ಸಭಾಧ್ಯಕರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದರು)

+ಶ್ರೀ ಪಿ.ಜಿ.ಆರ್ ಸಿಂಧ್ಯಾ (ಕನಕಪುರ):- ಮಾನ್ಯ ಅಧ್ಯಕ್ಷರೆ, ಅನೇಕ ಕಾರಣಗಳಿಂದ ನಾಲ್ಕು ದಿನಗಳಿಂದ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಲಿಕ್ಕಾಗಿಲ್ಲ. ಅವರ ವಿಶ್ಲೇಷಣೆ ಮಾಡಿ, ಸಮಯ ವ್ಯರ್ಥ ಮಾಡಲಿಕ್ಕೆ ನಾನು ತಯಾರಿಲ್ಲ. ಇವತ್ತು ಸುಮಾರು ಹತ್ತಾರು ಮಸೂದೆಗಳನ್ನು ನಾವು ಶಾಸನ ಮಾಡುವ ಪ್ರಕ್ರಿಯೆಯಲ್ಲಿದ್ದೇವೆ. ಇದರಲ್ಲಿ ನಮ್ಮ ಅಭಿಪ್ರಾಯಗಳನ್ನೂ ಮಂಡಿಸಬೇಕಾಗುತ್ತದೆ. ಈ ಮಧ್ಯೆ ಯಾವುದೇ ವಿಚಾರವಾಗಿರಲಿ, ನಾವೇ ಮಾಡಿಕೊಂಡಿರುವ ಕಾನೂನಿನ ಪ್ರಕಾರ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಸದನದಲ್ಲಿ ಒಂದು ಇಕ್ಕಟ್ಟಿನ ಪರಿಸ್ಥಿತಿ ಉದ್ಭವವಾಗಿದೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಆಡಳಿತ ಪಕ್ಷದ ಶಾಸಕರು ಈ ಸದನವನ್ನು ನಡೆಸುವ ದೃಷ್ಟಿಯಿಂದ ಸ್ವಲ್ಪ ಹೆಚ್ಚಿನ ಮನಸ್ಸು ಮಾಡಬೇಕಾಗುತ್ತದೆ. ಎಲ್ಲಾ ವಿಚಾರದಲ್ಲೂ ಅವರು ಒಂದು ಹೆಜ್ಜೆ ಹಿಂದೆ ಸರಿಯಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ, ಅಲ್ಪಿಮೇಟ್ಲಿ ಆಡಳಿತ ಪಕ್ಷದವರು ಹೇಳಿದ ಹಾಗೆ ಸರ್ಕಾರ, ಮುಖ್ಯಮಂತ್ರಿಗಳು, ಮಂತ್ರಿಮಂಡಲ ನಡೆಯುವುದು. ಅವರು ಸ್ವಲ್ಪ ಹಿಂದೆ ಸರಿಯಬೇಕಾಗುತ್ತದೆ. ಯಾರನ್ನೋ ಹೀಯಾಳಿಸಿ ಮಾತನಾಡುವುದರಿಂದ ಉಪಯೋಗವಾಗುವುದಿಲ್ಲ. ನಾವು ಅನೇಕ ಸಂದರ್ಭಗಳಲ್ಲಿ ಚರ್ಚೆ ಮಾಡುವಾಗ ಹೀಯಾಳಿಸಿ, ಚುಚ್ಚಿ ಮಾತನಾಡಬೇಕೆಂದು ಮಾಡುವುದು ಯಾವುದೇ ದುರುದ್ದೇಶ ಇಟ್ಟುಕೊಂಡಿಲ್ಲ. ವ್ಯವಸ್ಥೆಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಮಾತನಾಡುವುದಾಗಿದೆ. ಆದುದರಿಂದ, ಈ ಕಡೆಯ ಗೌರವಾನ್ವಿತ ಸದಸ್ಯರು ಒಳಗಡೆ ಬಂದರೆ, ತಾವು ಕುಳಿತುಕೊಂಡು ಸದನದ ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ಅನುಕೂಲವಾಗುತ್ತದೆಂದು

ನಾನು ಇಬ್ಬರಲ್ಲೂ ಸಹ ಕೇಳುತ್ತೇನೆ. ಸಂಸದೀಯ ಮಂತ್ರಿಗಳು ಬಂದಿಲ್ಲ. ಸಾಮಾನ್ಯವಾಗಿ ಅವರ ಅಬ್ಸೆನ್ಸ್‌ನಲ್ಲಿ ಸೆಕೆಂಡ್ ಬೆಂಚಿನಲ್ಲಿ ಕುಳಿತಿದ್ದರೂ ಕೂಡ ಮಾನ್ಯ ಕಾಗೋಡು ತಿಮ್ಮಪ್ಪನವರಿಗೇ ನಾವು ಸಂಸದೀಯ ವ್ಯವಹಾರ ಮಂತ್ರಿಗಳೆಂದು ಅಂದುಕೊಳ್ಳುವುದು. ಈ ಇಂಪಾಸ್ ಅನ್ನು ರಿಸಾಲ್ವ್ ಮಾಡಲಿಕ್ಕೆ ತಾವು ಇಂಟರ್‌ವೀನ್ ಆಗಬೇಕು. ಸಭಾನಾಯಕರು ಅಲ್ಲಿಗೆ ಹೋಗಿದ್ದಾರೆಂದು ತಿಳಿದು ಬಂದಿದೆ. ಒಟ್ಟಿನಲ್ಲಿ ಇನ್ನೂ ಎರಡು ದಿನ ಮಾತ್ರ ಇರುವುದು. ಅನೇಕ ವಿಚಾರಗಳ ಬಗ್ಗೆ ಸರ್ಕಾರದಿಂದ ನಮಗೆ ಮಾಹಿತಿ ಬೇಕಾಗುತ್ತದೆ. ಎರಡೂ ಕಡೆಯವರು ಒಂದೊಂದು ಹೆಜ್ಜೆ ಹಿಂದೆ ಸರಿದರೆ, ತಾವು ಅದಕ್ಕೆ ಪುಸ್ತಕದ ಪ್ರಕಾರವಾಗಿ ಚರ್ಚೆಗೆ ಯಾವ ರೀತಿ ಅವಕಾಶ ಮಾಡಿಕೊಡಬಹುದು ಎನ್ನುವುದನ್ನು ತಾವು ಪರಿಶೀಲನೆ ಮಾಡಬೇಕು. ನಾವು ಎದ್ದು ನಿಲ್ಲುವ ಸಂದರ್ಭದಲ್ಲಿ 10-20 ಜನರು ಎದ್ದು ನಿಂತರೆ ಸದನವನ್ನು ಹೇಗೆ ನಡೆಸುವುದು? ಆಡಳಿತ ಪಕ್ಷದ ಸದಸ್ಯರು, ಗೌರವಾನ್ವಿತ ಸದಸ್ಯರು ಏನು ನೋಟೀಸ್‌ಗಳನ್ನು ಕೊಟ್ಟಿದ್ದಾರೆ, ಅದನ್ನು ಪರಿಶೀಲಿಸಿ, ಅದಕ್ಕೆ ನಮ್ಮ ತಕರಾರೇನೂ ಇಲ್ಲ. ಆದರೆ, ಇಬ್ಬರೂ ಒಂದೊಂದು ಹೆಜ್ಜೆ ಹಿಂದೆ ಸರಿಯಬೇಕೆಂಬುದು ನನ್ನ ಮನವಿ.

ಅಧ್ಯಕ್ಷರು:- ಸದಸ್ಯರೆಲ್ಲರೂ ಒಳಗೆ ಹೋಗಿ.

ಶ್ರೀ ವೈ.ಕೆ. ರಾಮಯ್ಯ:- ನಿನ್ನೆ ನಾನು ಈ ರಾಷ್ಟ್ರದಲ್ಲಿ ಸಾರ್ವಜನಿಕರಿಗೆ ಆಗಿರುವ ತೊಂದರೆ ಕುರಿತು ಗಮನ ಸೆಳೆದಿದ್ದೇನೆ. ಅದರ ಬಗ್ಗೆ ಏನಾಯಿತೆಂಬುದನ್ನು ಹೇಳಬೇಕು, ಅಷ್ಟೆ.

ಅಧ್ಯಕರು:- ತಮಗೂ ಸಮಯ ಕೊಡುತ್ತೇನೆ. ಅವರು ಮಾತನಾಡಿದ ತಕ್ಷಣ ನೀವೇ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಸಿಂಧ್ಯಾರವರು ಏನು ವಿಷಯ ಪ್ರಸ್ತಾಪಿಸಿದ್ದಾರೆ, ಇವತ್ತು ಈ ಸದನದಲ್ಲಿ ನಡೆಯುತ್ತಿರುವ ಚರ್ಚೆ ಬಗ್ಗೆ ಮತ್ತು ಇನ್ನಿತರ ಸರ್ಕಾರಿ ಬಿಸಿನೆಸ್ ಬಗ್ಗೆ ಅದನ್ನು ಮುಂದುವರೆಸುವ ಬಗ್ಗೆ, ಅದು ನಡೆಯಬೇಕೆಂಬ ಬಗ್ಗೆ ನಮ್ಮ ಎಲ್ಲಾ ರೀತಿಯ ಸಹಕಾರವಿದೆ. ಇಲ್ಲಿಯವರೆಗೂ ಸಹಕರಿಸುತ್ತಾ ಬಂದಿದ್ದೇವೆ. ನಾವು ನಿನ್ನೆ ಐದು ಬಿಲ್‌ಗಳನ್ನು ಪಾಸ್ ಮಾಡಿದ್ದೇವೆ. ಇವತ್ತೂ ಸಾಕಷ್ಟು ಬಿಲ್‌ಗಳನ್ನು ತಾವು ಇಟ್ಟಿದ್ದೀರಿ. ಆ ಬಿಲ್‌ಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಮತ್ತು ಇನ್ನಿತರೆ ಜಲ್ವಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ನಾವು ತಯಾರಿದ್ದೇವೆ. ಆ ಬಿಲ್‌ಗಳನ್ನು ತೆಗೆದುಕೊಳ್ಳುವುದಾದರೆ ನಾವು ಚರ್ಚೆ ಮುಂದುವರೆಸಲು ತಯಾರಿದ್ದೇವೆ. ಅದರ ಬಗ್ಗೆ ತಾವು ಹೇಳಿದರೆ ಒಪ್ಪುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):- ಆ ಬಿಲ್ ಬಗ್ಗೆ ನಿನ್ನೆ ಏನಾಗಿತ್ತು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಯಾವ ರೀತಿ ಪತ್ರವನ್ನು ಕೊಟ್ಟಿದ್ದಾರೆ, ಯಾವ ವಿಷಯ ಪ್ರಸ್ತಾಪ ಮಾಡಬೇಕು....

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯಕುಟುಂಬ ಮತ್ತು ವಾರ್ತಾ ಸಚಿವರು):- ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದರು. ಆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲವೆನ್ನುವ ಕಾರಣಕ್ಕಾಗಿ ಒಳಗೆ, ಇಲ್ಲಿ ಬಂದಿದ್ದೀರಿ. ನಾನು ಅವರಿಗೇನು ಹೇಳುತ್ತಿದ್ದೇನೆಂದರೆ, ಯಾವೊಬ್ಬ ಸದಸ್ಯರೂ ಕೂಡ ತಮ್ಮ ಸ್ಥಾನದಿಂದ ಎದ್ದು ನಿಂತು, ಒಂದು ಪ್ರಸ್ತಾವನೆಯನ್ನೂ ಮಾಡಲಿಲ್ಲ. ನಿರ್ದಿಷ್ಟವಾದ ವಿಚಾರವನ್ನು ಹೇಳಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಎಲ್ಲಾ ಗೊತ್ತಿದೆ.

ಅಧ್ಯಕ್ಷರು:- ಅವರು ಮಾತನಾಡಿ ಮುಗಿಸಲಿ.

ಶ್ರೀ ಕಾಗೋಡು ತಿಮ್ಮಪ್ಪ- ನೀವು ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡುವುದಕ್ಕೆ ಅಧಿಕಾರವಿದೆ. ನೀವು ಮಾಡಿ, ನಾನು ಬೇಡವೆಂದು ಹೇಳಲಿಲ್ಲ. ಯಾವೊಬ್ಬ ಸದಸ್ಯರೂ ಒಂದು ನಿರ್ದಿಷ್ಟವಾದ ವಿಚಾರವನ್ನು, ನಿರ್ದಿಷ್ಟವಾದ ರೀತಿಯಲ್ಲಿ ಪ್ರಸ್ತಾಪ ಮಾಡದಿರುವ ಕಾರಣ, ನೀವು ಪಾಯಿಂಟ್ ಆಫ್ ಆರ್ಡರ್ ರೈಡ್ ಮಾಡಿರುವುದು ವ್ಯಾಕ್ಯೂಂನಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್:- ನೋ. ಯಾವ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದರೆಂಬುದು ಎಲ್ಲರಿಗೂ ಗೊತ್ತಿದೆ. ಅಜೆಂಡಾ ಏನಿದೆ ಅದರ ಪ್ರಕಾರ ಹೋಗಲಿ. ಅಜೆಂಡಾ ಪ್ರಕಾರ ಎಲ್ಲಾ ಬಿಸಿನೆಸ್ ಸ್ಟಾರ್ಟ್ ಮಾಡಿ, ಎಲ್ಲಾ ಸರಿ ಹೋಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ವಿರೋಧ ಪಕ್ಷದ ನಾಯಕರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ದಯವಿಟ್ಟು ಸ್ವೀಕಾರ ಮಾಡಿ. ನಂತರ, ಸಂಸದೀಯ ವ್ಯವಹಾರ ಸಚಿವರು, ಮುಖ್ಯಮಂತ್ರಿಗಳು, ಇತರೆ ಮುಖಂಡರ ಜೊತೆಯಲ್ಲಿ ಮಾತನಾಡಿ, ನಮ್ಮನ್ನೂ ಕರೆಸಿ, ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ, ಚರ್ಚೆ ಮಾಡೋಣ, ಅದನ್ನು ಯಾವ ಫಾರ್ಮ್‌ನಲ್ಲಿ ಮಾಡಬೇಕೆಂದು ಚರ್ಚಿಸೋಣ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಸಿಂಧ್ಯಾರವರ ಸಲಹೆ, ಹಾಗೂ ನಮ್ಮ ಜಗದೀಶ್ ಶೆಟ್ಟರ್‌ರವರ ಸಲಹೆಯನ್ನು ನಾವು ಕೇಳಿದ್ದೇವೆ. ಕಳೆದ 15 ವರ್ಷಗಳಿಂದ ಯಾವ ರೀತಿ ಸದನವನ್ನು ನಡೆಸಿದ್ದಾರೆ, ಯಾವ ಯಾವ ವಿಚಾರವನ್ನು ಹೇಗೆ ಹೇಗೆ ತೆಗೆದುಕೊಂಡಿದ್ದಾರೆ ಎಂಬುದನ್ನು ನಾವು ನೋಡಿದ್ದೇವೆ. ಅವರ ಉಪದೇಶ ನಮಗೆ ಬೇಕಾಗಿಲ್ಲ. ಚುಚ್ಚೋ ಮಾತು, ಮತ್ತೊಂದು ಎಲ್ಲವನ್ನೂ ನಾವು ನೋಡಿದ್ದೇವೆ. ಯಾರ್ಯಾರಿಗೆ ಯಾವ ರೀತಿ ಹೆಬ್ಬಾವು ಬಂತು, ಏನೇನಾಯಿತು, ಏನೇನು ಲೂಟಿ ಬಂತು ಎಂಬುದನ್ನು ಸಿಎಂಸಿ ವಿಚಾರದಲ್ಲಿ ನಾವು ನೋಡಿದ್ದೇವೆ. ನಿನ್ನೆ ಒಂದು ಸಣ್ಣ ವಿಚಾರವನ್ನು, ಜನರಲ್ ಆಗಿ ರೊಟೀನ್ ಆಗಿ ನಡೆಯುತ್ತಿದ್ದ ಸಣ್ಣ ವಿಚಾರಕ್ಕೆ.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದು ಸಣ್ಣ ವಿಚಾರವಲ್ಲ. ಈ ಮಾತನ್ನು ಹಿಂದೆ ತೆಗೆದುಕೊಳ್ಳಬೇಕು. ಇದು ಗಂಭೀರವಾದ ವಿಚಾರ. ಈ ರೀತಿಯಾಗಿ ಮಂತ್ರಿಗಳು ಹೇಳುತ್ತಾರೆಂದರೆ, ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು:- ಅವರು ಮಾತನಾಡುವವರೆಗೆ ಸುಮ್ಮನಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸಣ್ಣ ವಿಚಾರವಾಗಿದ್ದರೆ ಆ ನೋಟಿಫಿಕೇಷನ್ ಅನ್ನು ಏಕೆ ವಿತ್‌ಡ್ರಾ ಮಾಡಿಕೊಂಡಿರಿ?

(ಗೊಂದಲ)

(ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು:- ಅದು ಅವರ ಅಭಿಪ್ರಾಯವಿರಬಹುದಷ್ಟೆ.

(ಗೊಂದಲ)

ಅಧ್ಯಕ್ಷರು:- ನಿಮ್ಮನಾಯಕರು ಮಾತನಾಡುತ್ತಿದ್ದಾರೆ. ಅವರೂ ಮಾತನಾಡಬಹುದು. ಒಂದು ನಿಮಿಷ ಸುಮ್ಮನಿರಿ. ಅವರು ನಾನು ಟೈಂ ಕೊಟ್ಟಿದ್ದೆ. ಅವರು ಮಾತನಾಡುವವರೆಗೆ ಸುಮ್ಮನಿರಿ.

ಶ್ರೀ ಡಿ.ಕೆ. ಶಿವಕುಮಾರ್:- ನಾವು ಕಳೆದ 15 ದಿನಗಳಿಂದ ಕಾಶಪ್ಪನವರ್ ಇಷ್ಟೂ ಬಂದಾಗ, ಯಾವ ಇಷ್ಯೂವನ್ನು ಯಾವ ರೀತಿ ತೆಗೆದುಕೊಂಡು ಯಾವ ರೀತಿ ಅಸೆಂಬ್ಲಿಯಲ್ಲಿ ಪ್ರಾರಂಭವಾಯಿತೆಂಬುದನ್ನು ನಾವು ನೋಡಿದ್ದೇವೆ. ಮತ್ತೆ, ನಿನ್ನೆ ನಡೆದ ವಿಚಾರದಲ್ಲಿ ನಿನ್ನೆ ಒಂದು ಸರ್ಕ್ಯುಲರ್ ವಿಚಾರದಲ್ಲಿ, ಕಳೆದ 20 ವರ್ಷಗಳಿಂದ ಏನು ಸರ್ಕ್ಯುಲರ್ ಇತ್ತೆಂದು, ಅದೇ ಸರ್ಕ್ಯುಲರ್ ಅನ್ನು ಸರ್ಕಾರ ಪಾಲನೆ ಮಾಡುತ್ತಿದೆ, ಯಾವುದೋ ಒಂದು ಗುಪ್ತದ ವಿಚಾರವನ್ನು ತೆಗೆದುಕೊಂಡು, ಒಂದು ದಿನ 5 ಗಂಟೆಗಳು ಇಲ್ಲಿ ಸ್ಟಾಲ್ ಮಾಡಲಿಲ್ಲವೆ? ಅವರು ಆಗ ಬಿಲ್ ಅನ್ನು ಮರೆತಿದ್ದರಾ? ಅಸೆಂಬ್ಲಿಯಲ್ಲಿ ಪ್ರೊಸೀಡಿಂಗ್ಸ್ ಅನ್ನು ಮರೆತಿದ್ದರಾ? ಆಗ ಆ ಬಿಲ್ಸ್‌ಗಳೆಲ್ಲಾ ಎಲ್ಲಿಗೆ ಹೋಗಿತ್ತು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾವು ನಿಲುವಳಿ ಸೂಚನೆ ಮೂಲಕ ತಂದಿದ್ದೇವೆ. ಕಾನೂನುಬದ್ಧವಾಗಿ ತಂದಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಅವರ ನಂತರ, ನೀವು ಮಾತನಾಡಿ.

ಶ್ರೀ ಡಿ.ಕೆ. ಶಿವಕುಮಾರ್:- ಬಹಳ ದೊಡ್ಡ ಜವಾಬ್ದಾರಿ ಹೊತ್ತ ಜನ ಫೈನಾನ್ಸ್ ಬಿಲ್ ಬಂದಾಗ ಇಡೀ ರಾಷ್ಟ್ರದಲ್ಲಿ, ಇಡೀ ನಮ್ಮ ಸಂಪ್ರದಾಯದಲ್ಲಿ, ಫೈನಾನ್ಸ್ ಬಿಲ್ ಅನ್ನು ಅಪ್ರೂವ್ ಮಾಡಿದ ಉದಾಹರಣೆಗಳಿವೆ. ಇಲ್ಲಿ ಬಾಯ್‌ಕಾಟ್ ಮಾಡಿ, ರಾಷ್ಟ್ರಕ್ಕೆ, ರಾಜ್ಯದ ಜನರಿಗೆ ದ್ರೋಹ ಮಾಡಿದ ವಿಚಾರ ಈ ಸದನದಲ್ಲಿ ನಡೆದಿದೆ. ನೀವು ಬಾಯ್‌ಕಾಟ್ ಮಾಡಿ ಹೋಗಿದ್ದೀರಿ. ಹೇಳುವುದಕ್ಕೆ ನಾಚಿಕೆ ಇಲ್ಲ. ಇಡೀ ದೇಶವನ್ನು ಲೂಟಿ ಮಾಡಿದ್ದೀರಿ. ಲೂಟಿ ಮಾಡಿ.....

(ಗೊಂದಲ)

(ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ ಕುದುವನಹಳ್ಳಿ:- ಮಾನ್ಯ ಅಧ್ಯಕ್ಷರೆ, ಸದನವನ್ನು ನೋಡಲಿಕ್ಕೆ ಬೇರೆ ಬೇರೆ ಶಾಲೆಯ ಮಕ್ಕಳು ಬಂದಿದ್ದಾರೆ, ಅವರ ಮನಸ್ಸಿನ ಮೇಲೆ ಏನು ಪರಿಣಾಮ ಬೀರುತ್ತದೆ ಎನ್ನುವುದನ್ನು ಯೋಚಿಸಬೇಕು,...

ಅಧ್ಯಕ್ಷರು:- ಮಾನ್ಯ ಶ್ರೀನಿವಾಸಗೌಡರವರೇ, ನಾನು ನಿನ್ನೆ ಹೇಳಿದೆ, ಸಂಜೆ ಹೊತ್ತು ಟಿವಿಯಲ್ಲಿ ನೋಡಿದರೆ ನನಗೆ ಬೇಸರವಾಗುತ್ತದೆ, ಪತ್ರಿಕೆಗಳಲ್ಲಿ, ಟಿವಿಯಲ್ಲಿ ನೋಡಿದರೆ, ನಮ್ಮ ಸಭೆಯಲ್ಲಿ ಏನು ನಡವಳಿಕೆ ನಡೆಯುತ್ತಿದೆ ಅದನ್ನು ಜನ ನೋಡಿದರೆ ಏನೆನ್ನುತ್ತಾರೆ? ಮತದಾರ ಏನೆನ್ನುತ್ತಾನೆ?

ಶ್ರೀ ಜಗದೀಶ್ ಶೆಟ್ಟರ್:- ಅವರಿಗೆ ಆ ಮಾತನ್ನು ಹೇಳಿ.

(ಗೊಂದಲ)

ಅಧ್ಯಕ್ಷರು:- ಸ್ವಾಮಿ ಎಲ್ಲರಿಗೂ ಹೇಳುತ್ತಿದ್ದೇನೆ, ಅವರಿಗೂ, ಇವರಿಗೂ, ಇಡೀ ಸಭೆಗೆ ಹೇಳುತ್ತಿದ್ದೇನೆ.. ನೋ, ನೋ, ಯಾರ್ಯಾರು ಈ ರೀತಿ ಗಲಾಟೆ ಮಾಡುತ್ತಾರೋ ಅವರೆಲ್ಲರಿಗೂ ಇದು ಅನ್ವಯವಾಗುತ್ತದೆ, ಡೈಲಿ ಇದೇ ತರಹ ಆದರೆ ಮತದಾರರು ಏನನ್ನುತ್ತಾರೆ? ಈ ರೀತಿ ಆದರೆ ಆದು ಎಷ್ಟು ಜನ ಎಲೆಕ್ಟ್ ಆಗಿ ಬರುತ್ತಾರೆ ಎಷ್ಟು ಜನ ಸೋಲುತ್ತಾರೋ ನನಗಂತೂ ಅರ್ಥವಾಗುವುದಿಲ್ಲ... ನಾವಾಗಲಿ, ಅವರಾಗಲಿ, ಎಲ್ಲರಿಗೂ ಹೇಳುತ್ತಿದ್ದೇನೆ.. ಯಾರ್ಯಾರು ಮಾತನಾಡಲು ಅಡ್ಡಿಪಡಿಸುತ್ತಾರೋ ಎಲ್ಲರಿಗೂ ಹೇಳುತ್ತಿದ್ದೇನೆ. ಇದು ಎಲ್ಲರಿಗೂ ಅನ್ವಯಿಸುತ್ತದೆ. ಇವತ್ತು ಅವರು ಮಾಡಬಹುದು, ನಾಳೆ ನೀವು ಮಾಡಬಹುದು. ನಾಳೆ ಇನ್ನೊಬ್ಬರು ಮಾಡಬಹುದು, ಇಂಥವರಿಗೆ ಅಂಥ ಏನೂ ಇಲ್ಲ, ಎಲ್ಲರಿಗೂ ಅನ್ವಯಿಸುತ್ತದೆ.... ನಾನು ಹೇಳುವುದು ಇಷ್ಟೇ.... ನಿನ್ನೆ ಮಾನ್ಯ ವೈ.ಕೆ. ರಾಮಯ್ಯನವರು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದಾರೆ, ರೂಲ್ಸ್ ಪ್ರಕಾರ ಕೊಟ್ಟಿದ್ದಾರೆ, I will allow Mr. Y.K. Ramaiah to speak.

ಶ್ರೀ ಜಗದೀಶ್ ಶೆಟ್ಟರ್:- ಯಾವ ವಿಷಯದ ಬಗ್ಗೆ?

ಅಧ್ಯಕ್ಷರು:- ಇದೇ ವಿಷಯದ ಬಗ್ಗೆ ಅವರು ಕನ್‌ಸ್ಯೂಮರ್ಸ್‌ಗೆ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಲೀಡರ್ ಮೇಲೆ ಅವರೇನೂ ಹೇಳಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸಭಾಧ್ಯಕ್ಷರೆ, ಅಜೆಂಡದಲ್ಲಿ ಎಲ್ಲಿದೆ? ಅಜೆಂಡ ಬಿಟ್ಟು ಹೋಗುತ್ತಿದ್ದೀರಿ? ಅಜೆಂಡದಲ್ಲಿ ಏನೂ ಇಲ್ಲ. ಅಧ್ಯಕ್ಷರೇ, ಈ ರೀತಿ ಮಾಡಬಾರದು.. ಮಾನ್ಯ ವೈ.ಕೆ. ರಾಮಯ್ಯನವರ ಕಾಲಿಂಗ್ ಅಟೆನ್‌ಷನ್ ಅಜೆಂಡದಲ್ಲಿ ಎಲ್ಲಿದೆ? ಬೇಕಾದರೆ ನಾಳೆ ಇದನ್ನು ಇಡಿ. ಪ್ರಶ್ನೋತ್ತರ, ಬಿಲ್ಸ್, ತೆಗೆದುಕೊಳ್ಳಿ. ಪಾರ್ಲಿಮೆಂಟ್‌ನಲ್ಲಿ ಡಿಷ್‌ಕಷನ್ ಮಾಡಲು ಶ್ರೀ ವೈ.ಕೆ ರಾಮಯ್ಯನವರು ಬೇಕಾದರೆ ಪಾರ್ಲಿಮೆಂಟ್‌ಗೆ ಹೋಗಲಿ.. ಅಜೆಂಡದಲ್ಲಿರುವ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳಿ..

ಶ್ರೀ ವೈ.ಕೆ.ರಾಮಯ್ಯ:- ನಾನು ಈಗಾಗಲೇ ಸೂಚನೆಯನ್ನು ಕಳುಹಿಸಿದ್ದೇನೆ.. ನಾನು ಮಾತನಾಡುವಾಗ ಯಾವ ಸದಸ್ಯರು ಅಡ್ಡಿ ಮಾಡುತ್ತಾರೋ ಅಂಥ ಸದಸ್ಯರು ಮಾತನಾಡುವಾಗ ನಾನು ಅಡ್ಡಿಮಾಡಬೇಕಾಗುತ್ತದೆ. ನೀವು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಬೆಲೆ ಕೊಡುವುದಕ್ಕೂ ಸಿದ್ದವಾಗಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಕಾಲಿಂಗ್ ಅಟೆನ್‌ಷನ್ ಉತ್ತರ ಕೊಡುವವರು ಯಾರು?

(ಗೊಂದಲ)

ಶ್ರೀ ವೈ.ಕೆ.ರಾಮಯ್ಯ:- ನಾನು ಸ್ಪಷ್ಟವಾಗಿ ಹೇಳುತ್ತೇನೆ, ನೀವು ನನಗೆ ಅವಕಾಶ ಕೊಟ್ಟಾಗ ನನಗೆ ಅಡ್ಡಿಪಡಿಸುವ ಯಾರೇ ಸದಸ್ಯರಾಗಲಿ ಅವರು ಮಾತನಾಡುವಾಗ ನಾನು ಅಡ್ಡಿಪಡಿಸುತ್ತೇನೆ. ನಾನು ಸದನದಲ್ಲಿ ಇರುವವರೆಗೂ ಅವಕಾಶ ಕೊಡುವುದಿಲ್ಲ. ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಅವರ ಗಮನಕ್ಕೆ ಅಲ್ಲ..

(ಗೊಂದಲ)

ಶ್ರೀ ಡಿ.ವಿ. ಸದಾನಂದ ಗೌಡ:- ಇದರ ಬಗ್ಗೆ ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು:- ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಹೇಳಿ.

(ಗೊಂದಲ)

ಶ್ರೀ ಕರಿಯಣ್ಣ:- ಅವರಿನ್ನೂ ಪ್ರಾರಂಭಿಸಿಲ್ಲ ಪಾಯಿಂಟ್ ಆಫ್ ಆರ್ಡರ್ ಎಲ್ಲಿಂದ ಬರುತ್ತದೆ? ನಾವು ಇನ್ನೂ ಪ್ರಾರಂಭಿಸಿಲ್ಲ... ನೀವು ಪಾಯಿಂಟ್ ಆಫ್ ಆರ್ಡರ್‌ಗೆ ಹೇಗೆ ಅವಕಾಶ ಕೊಡುತ್ತಿದ್ದೀರಿ?.. ಯಾವ ನಿಯಮದ ಪ್ರಕಾರ ಕೊಡುತ್ತೀರಿ?..

(ಗೊಂದಲ)

ಶ್ರೀ ಯು.ಆರ್.ಸಭಾಪತಿ:- ಸದನದ ಬಾವಿಯಲ್ಲಿದ್ದವರಿಗೆ ಪಾಯಿಂಟ್ ಆಫ್ ಆರ್ಡರ್ ಹೇಗೆ ಕೊಡುತ್ತೀರಿ?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಈ ಕಾನೂನು ಪುಸ್ತಕ ಸದನದಲ್ಲಿ ಇರಬೇಕೆ ಅಥವಾ ಹರಿದು ಬಿಸಾಕಬೇಕೆ?..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ವೈ.ಕೆ. ರಾಮಯ್ಯನವರ ಕಾಲಿಂಗ್ ಅಟೆನ್‌ಷನ್ ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ?..

ಅಧ್ಯಕ್ಷರು:- ಕನ್‌ಸ್ಯೂಮರ್ಸ್‌ಗೆ ತೊಂದರೆಯಾಗುತ್ತದೆಂದು ಅವರು ಕೊಟ್ಟಿದ್ದಾರೆ... ನಿನ್ನೆ ಕೊಟ್ಟಿದ್ದಾರೆ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಕಾಲಿಂಗ್ ಅಟೆನ್‌ಷನ್‌ಗೆ ಉತ್ತರ ಬಂದಿದೆಯೇ ಹೇಗೆ? ನಾವು ಈಗಾಗಲೇ ಮೂವತ್ತು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೇವೆ.. ಅದಕ್ಕೆ ಯಾರು ಉತ್ತರ ಕೊಟ್ಟಿದ್ದಾರೆ? ನಮ್ಮವು ಒಂದೂ ಬಂದಿಲ್ಲ..

ಅಧ್ಯಕ್ಷರು:- ಅವರು ನಿನ್ನೆ ಕೊಟ್ಟಿದ್ದಾರೆ.. ಇವರೆಲ್ಲರೂ ಇವತ್ತು ಬೆಳಿಗ್ಗೆ ಕೊಟ್ಟಿದ್ದಾರೆ..

ಶ್ರೀ ಜಗದೀಶ್ ಶೆಟ್ಟರ್:- ಇಲ್ಲ ಹೊಸದಾಗಿ ಕ್ರಿಯೇಟ್ ಆಗಿದೆ, ಉತ್ತರ ಬರಲಿ.. ನಾವು ಭಾಲ್ಕಿದು ಕೇಳಿದ್ದೇವೆ. ಭೀಮಾ ನದಿಯನ್ನು ಕೇಳಿದ್ದೇವೆ. ಅದನ್ನು ತೆಗೆದುಕೊಳ್ಳಿ.

(ಗೊಂದಲ)

ತಮ್ಮ ಛೇರಿಗೆ ಅಗೌರವ ತೋರುತ್ತಿದ್ದಾರೆ, ಇದನ್ನು ತಾವು ಗಂಭೀರವಾಗಿ ಪರಿಗಣಿಸಬೇಕು..

ಶ್ರೀ ಡಿ.ವಿ. ಸದಾನಂದ ಗೌಡ:- ತಮ್ಮ ಛೇರನ್ನು.. ತಮ್ಮನ್ನು.. ಮಾಡಿಬಿಟ್ಟಿದ್ದಾರೆ..

(ಗೊಂದಲ)

12.10 ಪಿಎಂ

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಅರಿಕೆಯನ್ನು ಮಾಡಿಕೊಂಡಿದ್ದೇನೆ. ನಾನೇನು ಅರಿಕೆ ಮಾಡಿದ್ದೇನೆಂದು ಹೇಳಿದರೆ, ಈ ವಿಚಾರ ಇವತ್ತು ಬಹಳ ಪ್ರಮುಖವಾಗಿ ಗೌರವಾನ್ವಿತ ಆಡಳಿತ ಪಕ್ಷದ ಸದಸ್ಯರು ಏನು ಪ್ರಸ್ತಾಪ ಮಾಡಬೇಕೆಂದು ಇದ್ದಾರೆ, ಇದಕ್ಕೆ ಸಮಂಜಸವಾದ ಉತ್ತರವನ್ನು ಸರ್ಕಾರ ಈ ಸದನದಲ್ಲಿ ಕೊಡತಕ್ಕಂಥ ಸ್ಥಿತಿಯಲ್ಲಿ

ಇಲ್ಲ. ಅವರಿಗೆ ಹಕ್ಕೂ ಸಹಿತ ಇಲ್ಲ. ಇದು ಒಂದು ಭಾಗವಾಯಿತು. ಇವರು ಕಿರುಚಾಡುವುದರಿಂದ ಉಪಯೋಗವಾಗುವುದಿಲ್ಲ ಮಾನ್ಯ ಅಧ್ಯಕ್ಷರೇ ಕಿರುಚಾಡಿಕೊಂಡು ಹೋಗಬಹುದು ಅಷ್ಟೇನೆ, ನಾನೇನು ಅದಕ್ಕೆ ಪರಿಹಾರ ಹೇಳುತ್ತೇನೆಂದರೆ, ನನ್ನ ಅನುಭವದಿಂದ ಹೇಳುತ್ತಿರುವ ಮಾತಿದು. ಈ ಸದನ ಚೆನ್ನಾಗಿ ನಡೆಯಬೇಕೆಂದು ಇದ್ದರೆ ತಾವು ಈ ಸದನವನ್ನು ಚೆನ್ನಾಗಿ ನಡೆಸಬೇಕಾದರೆ ಆಡಳಿತ ಪಕ್ಷದ್ದೇ ವಿಶೇಷವಾಗಿ ಜವಾಬ್ದಾರಿ ಹೆಚ್ಚು ಎಂದು ನಾನು ತಿಳಿದುಕೊಂಡಿರತಕ್ಕವನು.

(ಗೊಂದಲ)

ಸುಮ್ಮನೆ ಓ ಎಂದುಬಿಟ್ಟರೆ ನಾವು ಕಿರುಚಾಡಬಹುದು ಅದರಿಂದ ಏನೂ ಉಪಯೋಗವಾಗುವುದಿಲ್ಲ. ತಾವೊಂದು ತೀರ್ಮಾನಕ್ಕೆ ಬಂದಿದ್ದೀರಿ.

(ಗೊಂದಲ)

ಅಧ್ಯಕ್ಷರು:- ನೀವು ಮಾತನಾಡಿ ಬೇಡ ಎಂದವರು ಯಾರು? ಮಾನ್ಯ ಸದಸ್ಯರು ಮಾತನಾಡುವಾಗ ಕೇಳಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಅವರು ಕೇಳದೇ ಹೋದರೂ ಪರವಾಗಿಲ್ಲ, ತಾವು ಕೇಳಿ. ತಾವು ಕೇಳಬೇಕೆನ್ನುವುದು ನಮ್ಮ ಪ್ರಾರ್ಥನೆ. ಅವರಿಗೆ ಕೇಳುವುದಕ್ಕೆ ಪಾಪ ತಾಳ್ಮೆ ಇಲ್ಲ. ಅದರಿಂದ ನಾನು ಬೇಜಾರು ಮಾಡಿಕೊಳ್ಳುವುದಿಲ್ಲ. ತಮ್ಮಲ್ಲಿ ನಾನೇನು ಕೇಳುವುದು ಎಂದರೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ನಿಮ್ಮ ಕೊಠಡಿಗೆ ನಮ್ಮನ್ನು ಕರೆಸಿದ್ದಿರಿ. ಕರೆಸಿದಾಗ ನಾನೇನು ಹೇಳಿದೆ, ಎರಡೂ ಕಡೆಯ ಗೌರವಾನ್ವಿತ ಸದಸ್ಯರುಗಳು ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೆ ಇನ್ನೆರಡು ದಿನಗಳ ಕಾಲ ಅಧಿವೇಶನ ನಡೆಯತಕ್ಕಂಥದ್ದು. ಅದ್ದರಿಂದ ಅವರು ಒಂದು ಹೆಜ್ಜೆ ಹಿಂದೆ ಸರಿಯಲಿ. ಇವರು ಒಂದು ಹೆಜ್ಜೆ ಹಿಂದೆ ಸರಿಯಲಿ. ಯಾವ ರೂಪದಲ್ಲಾದರೂ ನೀವು ಡಿಸ್ಕಷನ್‌ಗೆ ಅವಕಾಶ ಕೊಡುವಿರಂತೆ. ಈಗ ತಾವೇನು ಮಾಡುತ್ತಿದ್ದೀರಿ, ನಾನು ನಿಮ್ಮನ್ನು ಕ್ವೊಶ್ಚನ್ ಮಾಡುತ್ತಿಲ್ಲ ಮಾನ್ಯ ಅಧ್ಯಕ್ಷರೇ, ಸಬ್‌ಮಿಷನ್ ಮಾಡುತ್ತಿದ್ದೇನೆ. ಏನು ಎಂದು ಹೇಳಿದರೆ ಈಗ ಮಾನ್ಯ ವೈ.ಕೆ.ರಾಮಯ್ಯನವರು ಪೆಟ್ರೋಲ್ ಬಂಕ್‌ಗಳನ್ನು ಮುಚ್ಚುವುದರಿಂದ ರಾಜ್ಯದ ಜನತೆಗೆ ಕನ್‌ಸ್ಯೂಮರ್ಸ್‌ಗೆ ತೊಂದರೆಯಾಗುತ್ತದೆ, ಇದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕೆಂದು ಹೇಳಿ ಗಮನ ಸೆಳೆಯುವ ಸೂಚನೆಯನ್ನು ನಿನ್ನೆ ಕೊಟ್ಟಿದ್ದೇನೆಂದು ಹೇಳಿದ್ದಾರೆ; ನಾನು ಒಪ್ಪಿಕೊಳ್ಳುತ್ತೇನೆ. ಅವರ ಮಾತು ನೂರಕ್ಕೆ ನೂರು ಸತ್ಯ. ನಿನ್ನೆ ಕೊಟ್ಟಾಗ ಗಮನ ಸೆಳೆಯುವ ಸೂಚನೆ ಬಂದಾಗ ತಾವೇನು ಮಾಡುತ್ತೀರಿ? ಕಾನೂನಿನ ಪುಸ್ತಕದ ಪ್ರಕಾರ, ಸರ್ಕಾರಕ್ಕೆ ಬರೆದು ಕಳುಹಿಸುತ್ತೀರಿ. ನಿಮಗೆ ಇನ್ನೂ ಉತ್ತರ ಬಂದಿಲ್ಲ. ಉತ್ತರ ಬಂದಿದ್ದರೆ ತಾವು ಈ ಅಜೆಂಡಾದಲ್ಲಿ ಹಾಕುತ್ತಿದ್ದಿರಿ. ಆದರೂ ಸಹಿತ ಪುಸ್ತಕದಲ್ಲಿರತಕ್ಕಂಥದ್ದನ್ನು, ರೂಲ್ ಬುಕ್‌ನಲ್ಲಿ ಇರತಕ್ಕಂಥದ್ದನ್ನು ಸಸ್ಪೆಂಡ್ ಮಾಡಿ ಚರ್ಚೆಗೆ ಅವಕಾಶ ಕೊಡುವುದಕ್ಕೆ ತಮಗೆ ಅಧಿಕಾರ ಇದೆ. ನನ್ನ ಕಳಕಳಿಯ ಸಲಹೆ ಏನೆಂದು ಹೇಳಿದರೆ ದಯಮಾಡಿ ಇದಕ್ಕೆ ಅವಕಾಶ ಕೊಡಬಾರದು ಎಂದು ನಾನು ಹೇಳುದಿಲ್ಲ. ಆದರೆ ನಿಯಮಾವಳಿಗಳ ಪ್ರಕಾರವಾಗಿ ತಾವು ಕೊಡಬೇಕಾಗುತ್ತದೆ. ಈಗ ಅಜೆಂಡಾ ಏನು ಇದೆ, ಅದನ್ನು ತೆಗೆದುಕೊಂಡು ಹೋಗೋಣ. ಇದೇ ರೀತಿ ಸಭೆ ನಡೆಯುವುದಾದರೆ we cannot be a party to this kind of business. We will walk out of this House.

(ಈ ಹಂತದಲ್ಲಿ ಜನತಾದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಕರಿಯಣ್ಣ:- ಇನ್ನೂ ಶುರುವೇ ಮಾಡಿಲ್ಲ. ಯಾವುದಕ್ಕೆ ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಯಾವುದಕ್ಕೆಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು:- ಸ್ವಲ್ಪ ತಡೆಯಿರಿ. ನನಗೆ ಮಾತನಾಡುವುದಕ್ಕೆ ಟೈಮ್ ಕೊಡಿ. ಈಗ ಬೆಳಿಗ್ಗೆ ಅಲ್ಲಿ ಸೇರಿದ್ದೆವು. ಏನೂ ತೀರ್ಮಾನವಾಗಲಿಲ್ಲ. ಪುನಃ ಇಲ್ಲಿ ಗಲಾಟೆಯಾಗುತ್ತಿದೆ. ನಾವೊಂದು ಕೆಲಸ ಮಾಡೋಣ ಮೂರು ಗಂಟೆಗೆ ಸೇರೋಣ. ಅಷ್ಟರಲ್ಲಿ ನಾನು ಅವರನ್ನು ಕರೆಸಿ ಮಾತನಾಡುತ್ತೇನೆ. ಮೂರು ಗಂಟೆಗೆ ಸೇರೋಣ. ಅಷ್ಟರಲ್ಲಿ ಕರೆಸಿ ನಾನು ಪುನಃ ಮಾತನಾಡುತ್ತೇನೆ. ಶಿವಕುಮಾರ್‌ರವರೇ, ದಯವಿಟ್ಟು ತಾವು ಬನ್ನಿ. ಮೂರು ಗಂಟೆಗೆ ಮತ್ತೆ ಸೇರೋಣ.

(ಸದನವು 12-17 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(3) ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ವಿಷಯ:- ಕೇಂದ್ರ ಸರ್ಕಾರವು ಬಿಜೆಪಿ ಕಾರ್ಯಕರ್ತರಿಗೆ ಪೆಟ್ರೋಲ್ ಬಂಕ್ ಇತ್ಯಾದಿ ಮಂಜೂರು ಮಾಡಿರುವ ಬಗ್ಗೆ (ಚರ್ಚೆ ಮುಂ.)

(ಸದನವು 3-30ಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

+ಶ್ರೀ ಪಿ.ಜಿ.ಆರ್ ಸಿಂಧ್ಯಾ (ಕನಕಪುರ):- ಮಾನ್ಯ ಅಧ್ಯಕ್ಷರೇ, ನಿನ್ನೆ ದಿನ ಸಹ ಈ ಸದನದಲ್ಲಿ ಗುಪ್ತ ವಾರ್ತೆ ಇಲಾಖೆ ಸಲ್ಲಿಸಿರತಕ್ಕಂಥ ಒಂದು ಪತ್ರದ ಮೇಲೆ ಸುಮಾರು 5 ಗಂಟೆಗಳ ಕಾಲ ಚರ್ಚೆಯಾಯಿತು. ಆ ಚರ್ಚೆ ಪ್ರಾರಂಭವಾದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ಗೃಹ ಮಂತ್ರಿಗಳು ಇಂಟರ್ ವಿನ್ ಆಗಿ ಅವರು ಏನು 5 ಗಂಟೆಗಳ ಕಾಲ ಈ ಸದನದ ಸಮಯ ಖರ್ಚಾದ ಮೇಲೆ ಐದು ನಿಮಿಷ ಉತ್ತರ ಕೊಟ್ಟರು ದನ್ನು ಮೊದಲೇ ಕೊಟ್ಟಿದ್ದರೆ ಬಹುಶಃ 5 ಗಂಟೆ ಸಮಯ ಉಳಿಯುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ಈಗ ಇದರಲ್ಲಿ ಇರತಕ್ಕಂಥಾದ್ದು ಭಾವನೆಗಳ ಪ್ರಶ್ನೆ. ಈಗ ಏನಾಗಬೇಕು ಎತ್ತಾಗಬೇಕು ಎನ್ನುವುದು ಅದೆಲ್ಲಾ ಪಾರ್ಲಿಮೆಂಟ್‌ನಲ್ಲಿ ಆಗಿದೆ. ಈಗ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ನಮಗೆ ಉಳಿದಿರತಕ್ಕಂಥಾದ್ದು ಇನ್ನು 24 ಗಂಟೆಗಳು ಅಷ್ಟೇ. ನಾಳೆ ಸಾಯಂಕಾಲದ ಒಳಗೆ ಇಷ್ಟೊಂದು ಬಿಲ್‌ಗಳನ್ನು ಪಾಸ್ ಮಾಡಬೇಕೆಂದು ಹೇಳುತ್ತಿದ್ದೀರಿ. ಇವರು ನಾವು ಧರಣಿ ಮಾಡಲೇಬೇಕು ಎಂದು ಕುಳಿತುಕೊಂಡಿದ್ದರೆ ಈ ಸನ್ನಿವೇಶದಲ್ಲಿ ನೀವು ಸಭೆಯನ್ನು ಮುಂದುವರಿಸಿಕೊಂಡು ಹೋದರೆ, ಮಾನ್ಯ ಸಭಾನಾಯಕರು ಇದರಲ್ಲಿ

ಇಂಟರ್‌ವಿನ್ ಆಗದೇ ಹೋದರೆ ಉಪಯೋಗವಾಗುವುದಿಲ್ಲ ನಾನು ಅವರಿಗೆ ಅಫೀಲ್ ಮಾಡಿಕೊಳ್ಳುತ್ತೇನೆ. ಇದನ್ನು ಯಾವುದಾದರೊಂದು ರೀತಿಯಲ್ಲಿ ಇದನ್ನು ಸೆಟಲ್ ಮಾಡುವುದಕ್ಕೆ ಅವರು ಇಂಟರ್‌ವಿನ್ ಆಗಬೇಕು ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ಈಗ ಲೋಕಸಭೆಯಲ್ಲಿ ಆಗತಕ್ಕಂಥ ಎಲ್ಲಾ ಇಷ್ಯೂಗಳನ್ನು ಇಲ್ಲಿ ಡಿಬೇಟ್ ಮಾಡಬೇಕೆಂದು ಹೇಳಿದರೆ ಅದು ಕಷ್ಟವಾಗುತ್ತದೆ ಎನ್ನುವುದು ತಮಗೂ ಗೊತ್ತಿದೆ. ಅದು ಒಳ್ಳೆಯ ಸಂಪ್ರದಾಯವಲ್ಲ. ಈ ರೀತಿ ಮಾತನಾಡಿಕೊಂಡು ಕುಳಿತುಕೊಂಡರೆ ನಾವು ಕಿರುಚಾಡಬಹುದು, ಮಾತನಾಡಬಹುದು, ಅದರಿಂದ ಉಪಯೋಗವಾಗುವುದಿಲ್ಲ. ಮಾನ್ಯ ಸಭಾನಾಯಕರು ಇದರಲ್ಲಿ ಇಂಟರ್‌ವಿನ್ ಆಗಬೇಕೆಂದು ನಾನು ಅಫೀಲ್ ಮಾಡುತ್ತೇನೆ ಸ್ವಾಮಿ.

ಶ್ರೀ ಬಿ.ಆರ್. ನೀಲಕಂಠಪ್ಪ:- ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು:- ಮಾನ್ಯ ನೀಲಕಂಠಪ್ಪನವರೇ, ನಾನು ಸಮಯ ಕೊಡುತ್ತೇನೆ ಎಲ್ಲರೂ ಒಬ್ಬೊಬ್ಬರಾಗಿ ಮಾತನಾಡಿ. ಈಗ ಮಾನ್ಯ ಶಿವಕುಮಾರ್ ಮಾತನಾಡುತ್ತಾರೆ.

ಶ್ರೀ ಡಿ.ಕೆ.ಶಿವಕುಮಾರ್(ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೇ, ಈ ಗಂಭೀರವಾದ ವಿಚಾರವನ್ನು ನಮ್ಮ ಸದಸ್ಯರು ಅನೇಕ ರೂಪದಲ್ಲಿ ತಮ್ಮ ಮುಂದೆ ಪ್ರಸ್ತಾಪ ಮಾಡಲು ಅವಕಾಶ ಬೇಕು ಎಂಬ ಪ್ರಸ್ತಾವನೆ ಸಲ್ಲಿಸಿದ್ದಾರೆ. ಮಾನ್ಯ ವೈ.ಕೆ. ರಾಮಯ್ಯನವರು ನಿನ್ನೆ ದಿವಸ ಏನು ಒಂದು ನೋಟಿಸ್ ಕೊಟ್ಟಿದ್ದಾರೆ ಅದಕ್ಕೆ ತಾವು ಅವರು ಚರ್ಚೆ ಪ್ರಾರಂಭ ಮಾಡಲಿ ಎಂದು ಅನುಮತಿ ಕೊಟ್ಟಿರಿ. ಅವರು ಚರ್ಚೆ ಮಾಡಲು ನಿಂತುಕೊಂಡರು. ಈ ಮಧ್ಯದಲ್ಲಿ ಅವರು ಚರ್ಚೆ ಮಾಡಬಾರದು...

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಅವರು ಯಾವ ರೂಲ್ಸ್ ಪ್ರಕಾರ ಮಾತನಾಡುತ್ತಾರೆ. ಗಮನ ಸೆಳೆಯುವ ಸೂಚನೆ ಯಾವುದು? ತಾವು ಯಾವ ರೂಲ್ಸ್‌ನಲ್ಲಿ ಅವಕಾಶ ಕೊಟ್ಟಿದ್ದೀರಿ? ಗಮನ ಸೆಳೆಯುವ ಸೂಚನೆಗೆ ಯಾವ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ?

(ಗೊಂದಲ)

ಅಧ್ಯಕ್ಷರು:- ಈಗ ಮಾನ್ಯ ಸಿಂಧ್ಯರವರು ಮಾತನಾಡುವಾಗ ಅವರು ಸುಮ್ಮನಿರಲಿಲ್ಲವೇ? ಅವರೂ ಸದಸ್ಯರಿದ್ದಾರೆ. He has got every right to speak. He is an elected member of this House. ನೀವು ಹೇಗೆ ಮಾತನಾಡುತ್ತೀರೋ ಹಾಗೇ ಅವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಅವರು ಯಾವಾಗ ನೋಟೀಸ್ ಕೊಟ್ಟಿದ್ದಾರೆ?

(ಗೊಂದಲ)

ಅಧ್ಯಕ್ಷರು:- ಅವರು ಎದ್ದು ಮೆನ್‌ಷನ್ ಮಾಡುವುದಕ್ಕೇ ನೀವು ಬಿಡುತ್ತಿಲ್ಲವಲ್ಲಾ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಯಾವ ರೂಲ್‌ನಲ್ಲಿ?

ಅಧ್ಯಕ್ಷರು:- ನಾನು ಹೇಳುತ್ತೇನೆ ಕೇಳಿ. ಅವರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದರು. ಅಮೇಲೆ ಅವರು ಬಂದು ಅದು ಬರುವುದಿಲ್ಲ ಒಂದು ದಿವಸದಲ್ಲಿ ಆದ್ದರಿಂದ ನನಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡಿ ಎಂದು ಕೇಳಿದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಶೂನ್ಯ ವೇಳೆ ಆಗಿಲ್ಲ.

ಅಧ್ಯಕ್ಷರು:- ನಿನ್ನೆ ನಾನು ನಿಮಗೆ ಅಲೋ ಮಾಡಲಿಲ್ಲವೇ? ನಾನು ಗಮನ ಸೆಳೆಯುವ ಸೂಚನೆಯನ್ನು ಕನ್‌ವರ್ಟ್ ಮಾಡಿದ್ದೇನೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೇ, ಅವರು ನಿಮ್ಮನ್ನೆ ಪ್ರಶ್ನೆ ಮಾಡುತ್ತಿದ್ದಾರೆ? ಅವರನ್ನು ಸದನದಿಂದ ಹೊರಗೆ ಹಾಕುವುದು ಒಳ್ಳೆಯದು.

ಅಧ್ಯಕ್ಷರು:- ಎಲ್ಲಾ ಒಂದು ಕಾಲು ಗಂಟೆಯಲ್ಲಿ ಮುಗಿದು ಹೋಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ತಾವು ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಯ್ಯನವರು ಗಮನ ಸೆಳೆಯುವ ಸೂಚನೆಯ ನೋಟಿಸ್ ಕೊಟ್ಟಿದ್ದಾರೆಂದು ತಾವು ಬೆಳಿಗ್ಗೆ ಹೇಳಿದಿರಿ. ಈಗ ಶೂನ್ಯ ವೇಳೆಯಲ್ಲಿ ಎಂದು ಹೇಳುತ್ತಿದ್ದೀರಿ ಇದು ನಮಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:- ಸ್ವಲ್ಪ ತಡೆಯಿರಿ. ಅವರು ಮಾತನಾಡಲು ತಾವು ಬಿಡಲಿಲ್ಲ. ನಾನು ಆಗಲಿ ಶೂನ್ಯ ವೇಳೆಯಲ್ಲಿ ಅವಕಾಶ ಮಾಡಿಕೊಡೋಣ ಎಂದು ಹೇಳೋಣ ಎಂದು ಇದ್ದೆ. ಅಷ್ಟರಲ್ಲಿ ತಾವು ಬಿಡಲಿಲ್ಲ. ಅವರು ಎದ್ದು ನಿಂತುಕೊಂಡು ಮಾತನಾಡುವುದಕ್ಕೆ ತಾವು ಬಿಡಲಿಲ್ಲವಲ್ಲಾ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ತಾವು ಬೆಳಿಗ್ಗೆ ಗಮನ ಸೆಳೆಯುವ ಸೂಚನೆ ಕಳುಹಿಸಿದ್ದಾರೆಂದು ಹೇಳಿದಿರಿ. ತಮ್ಮ ಮೇಲೆ ಒತ್ತಡ ತರುತ್ತಿದ್ದಾರೆ. ತಾವು ಇದಕ್ಕೆ ಈಲ್ಡ್ ಆಗಬಾರದು. ಬೆಳಿಗ್ಗೆ ಗಮನ ಸೆಳೆಯುವ ಸೂಚನೆ ಕೊಡುವುದು. ಈಗ ಮತ್ತೆ ಶೂನ್ಯ ವೇಳೆ ಎಂದು ಹೇಳುವುದು. ಇದು ಏನು? ಮಾನ್ಯ ನೀಲಕಂಠಪ್ಪನವರು ನಿಯಮ 69 ಎಂದು ಹೇಳುವುದು. ಇದು ನನಗೆ ಅರ್ಥವಾಗುತ್ತಿಲ್ಲ. ಇದು ಕೇವಲ ರಾಜಕೀಯ ನಾಯಕರನ್ನು ಬ್ಲೇಮ್ ಮಾಡುವ ಸಲುವಾಗಿ ಈ ರೀತಿ ಮಾಡುತ್ತಿದ್ದಾರೆ. ಇದು ಒಳ್ಳೆಯದಲ್ಲ.

(ಗೊಂದಲ)

ಅಧ್ಯಕ್ಷರು:- ಕೇಳಿ, I have got every right to convert. I have got all powers.

(ಗೊಂದಲ)

ಅಧ್ಯಕ್ಷರು:- ಅವರು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದರು. ಆಮೇಲೆ ಬಂದು ಅದು ಬರುವುದಿಲ್ಲ ನನಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ ಎಂದು ರಿಕ್ವೆಸ್ಟ್ ಮಾಡಿಕೊಂಡರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಒಂದು ಸಲ ಗಮನ ಸೆಳೆಯುವ ಸೂಚನೆ ಎಂದು; ಇನ್ನೊಂದು ಸಲ ಶೂನ್ಯ ವೇಳೆ ಎಂದು ಹೇಳುವುದು. ಇದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:- ನಿಯಮ 363ರ ಪ್ರಕಾರ ನನಗೆ ಕನ್‌ವರ್ಟ್ ಮಾಡುವ ಅಧಿಕಾರ ಇದೆ. ತಾವು ಓದಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಅವರಿಗೆ ಯಾವಾಗ ಬೇಕೋ ಆ ಸಂದರ್ಭದಲ್ಲಿ ತಮ್ಮ ಡಿಸ್ಕಷನ್ ಅನ್ನು ಉಪಯೋಗ ಮಾಡಿ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದೇ ಅವಕಾಶವನ್ನು ಬೇರೆ ಸದಸ್ಯರು ಉಪಯೋಗ ಮಾಡಿಕೊಂಡರೆ ಅದಕ್ಕೆ ಯಾವ ರೂಲ್ಸ್ ಇದೆ. ಹೇಗೆ ಮಾಡುತ್ತೀರಿ ಎಂದು ಪ್ರಶ್ನೆ ಮಾಡುತ್ತೀರಲ್ಲಾ ಇದು ಯಾವ ನ್ಯಾಯ?

(ಗೊಂದಲ)

ಅಧ್ಯಕ್ಷರು:- ಬೆಳಿಗ್ಗೆ ಅವರು ಎದ್ದು ನಿಂತು ಮಾತನಾಡಲು ಅವಕಾಶವನ್ನೇ ತಾವು ಕೊಡಲಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಅದಕ್ಕೆ ರೂಲ್ಸ್ ಇಲ್ಲ. ತಾವು ಈ ರೀತಿ ಗಲಾಟೆ ಮಾಡಲು ಯಾವ ರೂಲ್ಸ್ ಇದೆ?

(ಗೊಂದಲ)

ಅಧ್ಯಕ್ಷರು:- ಅವರು ಮಾತನಾಡುವುದಕ್ಕೆ ತಾವು ಬಿಡಲಿಲ್ಲ. ಮಾತನಾಡುವುದಕ್ಕೆ ಬಿಟ್ಟಿದ್ದರೆ ನಾನು ಹೇಳುತ್ತಿದ್ದೆ.

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ:- ಸನ್ಮಾನ್ಯ ಅಧ್ಯಕ್ಷರೇ, ದಯಮಾಡಿ ಈ ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ಇವತ್ತು ರಾಜ್ಯದಲ್ಲಿ ಆಗಿರುವಂಥ ಅನ್ಯಾಯವನ್ನು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಬೇಕು.

ಅಧ್ಯಕ್ಷರು:- ಮಾತನಾಡುವುದಕ್ಕೇ ಬಿಡುವುದಿಲ್ಲ ನೀವು. ಬೆಳಿಗ್ಗೆ ಮಾತನಾಡಲಿಕ್ಕೆ ಬಿಟ್ಟಿದ್ದರೆ, ಆಗಲೇ ಹೇಳುತ್ತಿದ್ದೆ ನಾನು. ನಿಯಮ 363ನ್ನು ನೋಡಿ, ನೀವು ಸುಮ್ಮನೆ ಏನೇನೋ ಮಾತನಾಡಬೇಡಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಖರ್ಗೆಯವರೇ, ಮಾನ್ಯ ಸಿಂಧ್ಯರವರು ಏನು ಹೇಳಿದರು, ಅದರ ಬಗ್ಗೆ ದಯವಿಟ್ಟು ಆಲೋಚನೆ ಮಾಡಿ ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸಿಂಧ್ಯರವರು ಕೊಟ್ಟ ಸಲಹೆಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಯಾವ ಕಾರಣಕ್ಕಾಗಿ ಮಾನ್ಯ ರಾಮಯ್ಯನವರು ನೋಟೀಸ್ ಕೊಟ್ಟಿದ್ದಾರೆ ಅದನ್ನು ತಾವು ಈಗಾಗಲೇ ಒಪ್ಪಿಕೊಂಡು ಚರ್ಚೆ ಮಾಡಲಿಕ್ಕೆ ತೆಗೆದುಕೊಳ್ಳುವುದಾಗಿ ಹೇಳಿದ್ದೀರಿ. ಅವರು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಲಿ. ಅವರು ಏನು ಹೇಳುತ್ತಾರೆ, ಕೇಳೋಣ. ಆಮೇಲೆ, ಅವರಿಗೂ ಉತ್ತರ ಕೊಡಲಿಕ್ಕೆ ಅವಕಾಶವಿರುತ್ತದೆ, ಉತ್ತರ ಕೊಡಲಿ.

(ಗೊಂದಲ)

ಅಧ್ಯಕ್ಷರು:- ನಿಮ್ಮ ಡೆಪ್ಯೂಟಿ ಲೀಡರ್ ಮಾತನಾಡುತ್ತಾರೆ, ಅವರು ಮಾತನಾಡಲಿಕ್ಕೆ ಸಮಯ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಈಗೇನಾಗಿದೆ ಎಂದರೆ ನಿಮ್ಮ ಪೆಟ್ರೋಲ್ ಬಂಕ್‌ಗಳೆಲ್ಲಾ ಮುಚ್ಚಿಹೋಗಿವೆ. ಸರ್ಕಾರ ತನ್ನ ಜವಾಬ್ದಾರಿಯನ್ನು ತಿಳಿದುಕೊಂಡು, ಯಾರು ಉತ್ತರ ಕೊಡಬೇಕೋ ಅವರು ಕೊಟ್ಟೇಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು:- ತಾವು ಮಾತನಾಡುವಾಗ ಅವರು ಸುಮ್ಮನೆ ಇದ್ದರು. ಅವರು ಮಾತನಾಡುವಾಗ ಮಾತ್ರ ನೀವು ಗಲಾಟೆ ಮಾಡುತ್ತೀರಿ, ಇದು ಯಾವ ನ್ಯಾಯ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಎಲ್ಲವನ್ನೂ ಹೇಳುವುದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟರೆ, ಅವರು ತಮ್ಮಲ್ಲಿರತಕ್ಕ ಫ್ಯಾಕ್ಟ್ ಮೇಲೆ ಮಾತನಾಡುತ್ತಾರೆ. ತದನಂತರ ಉತ್ತರ ಕೊಡುವವರು ಕೊಡುತ್ತಾರೆ. ಕೇಳುವುದಾದರೆ ಕೇಳಲಿ, ಇಲ್ಲದೇ ಹೋದರೆ ಅವರಿಗೆ ಏನು ತಿಳಿಯುತ್ತದೋ ಅದನ್ನು ಹೇಳಲಿ.

ಶ್ರೀ ಡಿ.ವಿ. ಸದಾನಂದಗೌಡ:- ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ದಯವಿಟ್ಟು ಹೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:- ಅವರು ಏನುಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಾರೆ ನೋಡೋಣ. ದಯವಿಟ್ಟು ಕೇಳಿ. .... ಎನ್ನುವ ಪದವನ್ನು ತೆಗೆದು ಹಾಕಿದ್ದೇನೆ.

ಡಿ.ವಿ.ಸದಾನಂದಗೌಡ:- ಸಾರ್, ಪಾಯಿಂಟ್ ಆಫ್ ಆರ್ಡರನ್ನು ಕೇಳುವುದಕ್ಕೆ ಅವರಿಗೆ ತಾಳ್ಮೆ ಇಲ್ಲ. ತಾವು ಸದನವನ್ನು ರಿಪ್ರಿಸೆಂಟ್ ಮಾಡುವುದಿಲ್ಲ. ನಿಯಮಾವಳಿಗಳನ್ನು ಕೇಳುವ ಸೌಜನ್ಯ ಆಡಳಿತ ಪಕ್ಷದವರಿಗೆ ಇಲ್ಲ ಎಂದರೆ,ನಾವೇನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು:- ಅವರು ಪಾಯಿಂಟ್ ಆಫ್ ಆರ್ಡರ್ ಏನು ಹೇಳುತ್ತಾರೆಂದು ಒಂದು ನಿಮಿಷ ಕೇಳೋಣ. Let us hear for one minutes.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಖರ್ಗೆಯವರು ಹೇಳಿದರು,ಮಾನ್ಯ ವೈ.ಕೆ. ರಾಮಯ್ಯನವರು ಕೊಟ್ಟಂಥ ಕಾಲಿಂಗ್ ಅಟೆನ್‌ಷನ್‌ಗೆ ತಾವು ಅವಕಾಶ ಕೊಡಬೇಕೆಂದು ಹೇಳಿದ್ದಿರಿ, ನೀವು ಅವಕಾಶ ಕೊಡಲಿಕ್ಕೆ ತಯಾರಿದ್ದಿರಿ ಎಂಬ ಮಾತನ್ನು ಹೇಳಿದರು. ದಯವಿಟ್ಟು ತಾವು ಸೆಕ್ಷನ್ 73(1)ನ್ನು ವಾಚನ ಮಾಡಬೇಕು.

> A Member may, with the previous permission of the Speaker call the attention of a Minister to any matter of urgent public importance and the Minister may make a brief statement or ask for time to make a statement at a later hour or date;

ಇದರಲ್ಲಿ ಯಾರು ಮಂತ್ರಿಗಳು. ಈ ಇಷ್ಯೂನಲ್ಲಿ ಯಾರಾದರೂ ಉತ್ತರ ಕೊಡಬೇಕಾದರೆ only a Central Minister can answer and not the State Minister. Next is, Rule 73(2); it is very clear.

> There shall be no debate on such statement at the time it is made but each member in whose name the item statnds in the list of business may.

ಇವತ್ತು ತಾವು ಲಿಸ್ಟ್ ಆಫ್ ಬಿಸಿನೆಸ್ ಕಳುಹಿಸಿಕೊಟ್ಟಿದ್ದೀರಿ. ಈ ಪಟ್ಟಿಯಲ್ಲಿ ಈ ವಿಷಯ ಇಲ್ಲ. ಲಿಸ್ಟ್ ಆಫ್ ಬಿಸಿನೆಸ್‌ನಲ್ಲಿ ಆರು ಗಮನ ಸೆಳೆಯುವ ಸೂಚನೆಗಳು ಇವೆ. ಮೊದಲನೆಯದು ಮಾನ್ಯ, ಜಯಪ್ರಕಾಶ್ ಹೆಗಡೆ, ಕೆ.ಬಿ. ಮಲ್ಲಿಕಾರ್ಜುನ, ಹಂಪನಗೌಡ ಬಾದರ್ಲಿ, ಮಹಾಂತೇಶ ಕೌಜಲಗಿರವರದ್ದು, ಎರಡನೆಯದು ಚಂದ್ರಪ್ಪ ಅವರದ್ದು, ಮೂರನೆಯದು ಪ್ರಕಾಶ ಹುಕ್ಕೇರಿಯವರದ್ದು, ನಾಲ್ಕನೆಯದು ಶಿವಶಂಕರರೆಡ್ಡಿಯವರದ್ದು, ಐದನೆಯದು ಹನುಮೇಗೌಡರದ್ದು, ಆರನೆಯದು ಗುಂಡಪ್ಪ ವಕೀಲರದ್ದು, ಈ ಆರನ್ನು ಲಿಸ್ಟ್‌ನಲ್ಲಿ ಕೊಟ್ಟಿದ್ದು, ಇದರಲ್ಲಿ ಇಲ್ಲದೇ ಇರುವ ವಿಷಯವನ್ನು ನೀವು ಕಾಲಿಂಗ್ ಅಟೆನ್‌ಷನ್‌ನಲ್ಲಿ ಹೇಗೆ ತೆಗೆದುಕೊಳ್ಳುತ್ತೀರಿ?

(ಗೊಂದಲ)

ಅಧ್ಯಕ್ಷರು:- ಅವರ ಪಾಯಿಂಟ್ ಆಫ್ ಆರ್ಡರಿಗೆ ನಾನು ಉತ್ತರ ಹೇಳುತ್ತೇನೆ. You please complete. (Interruptions)

ಶ್ರೀ ಎಸ್.ಸುರೇಶ್ ಕುಮಾರ್:- ಮಾನ್ಯ ವೈ.ಕೆ. ರಾಮಯ್ಯನವರು ನಿನ್ನೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟರು, ಇವತ್ತು ಬಂದು ಜೀರೋ ಹವರ್‌ಗೆ ಕೊಟ್ಟರು ಎಂದು ಹೇಳಿದಿರಿ. ದಿನಾಂಕ: 7-08-02 ರಂದು ಅಂದರೆ ಇವತ್ತು ಕೊಟ್ಟಿದ್ದಾರೆ.

ಅಧ್ಯಕ್ಷರು:- ಸ್ವಾಮಿ, ನಿಯಮ 363ನ್ನು ನೋಡಿ. I have got every power to convert. Please read Rule 363. The chair has got power to converty any matter when it is not mentioned in the Rule.

ಶ್ರೀ ಎಸ್.ಸುರೇಶ್ ಕುಮಾರ್:- ಈ ಕಾಲಿಂಗ್ ಅಟೆನ್‌ಷನ್‌ನಲ್ಲಿ ಮ್ಯಾಟರ್‌ನೆಲ್ಲಾ ಹಾಕಿ, ವೈ.ಕೆ. ರಾಮಯ್ಯ 7-8-2002 ಅಂದರೆ ಇವತ್ತಿನ ಡೇಟ್‌ನಲ್ಲಿ ಕೊಟ್ಟಿದ್ದಾರೆ.

ಅಧ್ಯಕ್ಷರು:- ನಿನ್ನೆ ಸ್ವಾಮಿ ಅವರು ಕೊಟ್ಟಿದ್ದು. ಅವರು ನಿನ್ನೆಯೇ ಸರ್ಕಾರಕ್ಕೆ ಕಳುಹಿಸಿದ್ದರು. ಆಫೀಸ್ ಪೇಪರ್ ತೆಗೆಯಿರಿ, ನಿನ್ನೆ ಮಧ್ಯಾಹ್ನ ತಂದುಕೊಟ್ಟಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಒಮ್ಮೆ ರೂಲ್-69 ಮತ್ತೊಮ್ಮೆ ಕಾಲಿಂಗ್ ಅಟೆನ್‌ಶನ್, ಇನ್ನೊಮ್ಮೆ ಜೀರೋಅವರ್ ಎಂದು ಹೇಳುತ್ತಾ ಇದ್ದೀರಿ.... ಅವರುಗಳು ತಮ್ಮ ಸ್ಥಾನವನ್ನು .. ಮಾಡುತ್ತಾ ಇದ್ದಾರೆ.

(ಗೊಂದಲ)

ಅಧ್ಯಕ್ಷರು:- ನಾನು ನೋಟೀಸಿನ ಪ್ರತಿಯನ್ನು ತರಿಸಿಕೊಳ್ಳುತ್ತೇನೆ. Let them see. ಯಾವತ್ತೂ ಇಲ್ಲದಿದ್ದುದ್ದನ್ನು ಹೇಳುತ್ತಿದ್ದೀರಿ. Let them show it to the Press. ಪ್ರೆಸ್‌ನವರಿಗೆ ನೀವು ಮಿಸ್‌ಗೈಡ್ ಮಾಡುತ್ತಿದ್ದೀರಿ. ಅವರು ೭ನೇ ತಾರೀಖಿಗೆ ಕೊಟ್ಟಿದ್ದಾರೆ. ನೀವು ಇಲ್ಲ ಎಂದು ಹೇಳುತ್ತಿದ್ದೀರಿ. ಪ್ರೆಸ್‌ನವರು ಡಿಸೈಡ್ ಮಾಡಲಿ. They are the Judges.

An Hon.Member:- He cannot challenge your order.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅವರೇನು ಸುಪ್ರೀಮ್? ಸದನದ ಎಲ್ಲ ಸದಸ್ಯರು ಸಮಾನರು. ಫೈಲ್‌ನ್ನು ಏಕೆ ಕೊಡಬೇಕು... ಅದನ್ನು ನೋಡತಕ್ಕಂಥವರು ಅಧಿಕಾರಿಗಳು...

ಅಧ್ಯಕ್ಷರು:- ಅಕಸ್ಮಾತ್ ಮಿಸ್‌ಗೈಡ್ ಆಗಬೇ ಇರಲಿ ಎಂದು ತೋರಿಸಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಫೈಲ್‌ನ್ನು ನೋಡತಕ್ಕಂಥ ಅಧಿಕಾರ ಅವರಿಗೆ ಇದೆಯೇನು? ಇದು ಸದಸ್ಯರು ಕೊಟ್ಟಂಥಾದ್ದು.

ಅಧ್ಯಕ್ಷರು:- ಅವರ ಒಂದು ಹೇಳಿಕೆಯಿಂದ ಪ್ರೆಸ್‌ನವರು ಮಿಸ್‌ಗೈಡ್ ಆಗದೇ ಇರಲಿ ಎಂದು ತೋರಿಸಿದ್ದೇನೆ ಅಷ್ಟೆ... They are the Judges. Press people are the Judges, let them say.

(ಗೊಂದಲ)

ಅವರೇ ಹೇಳಲಿ. ನನ್ನ ಅಬ್‌ಜೆಕ್ಷನ್ ಇಲ್ಲ. ನಿಯಮ 363ರಲ್ಲಿ ಏನಿದೆ ಓದಿ.. I have got every power to convert, if it is not mentioned in the Rules Book.

(ಗೊಂದಲ)

Sri Jagadish Shettar:- Calling Attention Rule 73(2): There shall be no debate on such statement at the time it is made but each member in whose name the item stands in the list of business may with the permission of the Speaker, may ask a clarification and attention of a Minister and the Minister may make a brief statement or ask for time to make a statement at a later hour or date.

ಅಧ್ಯಕ್ಷರು:- ಮಾನ್ಯ ರಾಮಯ್ಯನವರು 6ನೇ ತಾರೀಖಿಗೆ ನೋಟೀಸ್‌ನ್ನು ಕೊಟ್ಟಿದ್ದಾರೆ. ಆದರೆ ಇವರುಗಳು 7ನೇ ತಾರೀಖಿಗೆ ಕೊಟ್ಟಿದ್ದು ಎಂದು ಹೇಳುತ್ತಿದ್ದಾರೆ. How can it be? Let them see; They are the fourth Estate of the Democracy. Let them not be misguided. That is why I Showed it to them.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ತಮಗೆ ರೂಲ್ಸ್‌ನಲ್ಲಿ ಸಂಪೂರ್ಣವಾದಂಥ ಅಧಿಕಾರ ಇದೆ. ಒಂದು ವೇಳೆ ರೂಲ್ಸ್ ಪರ್ಮಿಟ್ ಮಾಡದಿದ್ದರೂ ಕೂಡ ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ತಾವು ಯಾವ ಸದಸ್ಯರಿಗಾಗಲೀ ಮಾತನಾಡತಕ್ಕಂಥದ್ದಕ್ಕೆ ಅವಕಾಶ ಕೊಡಬಹುದು.

(ಗೊಂದಲ)

ಅಧ್ಯಕ್ಷರು:- ಅವರು ಯಾವಾಗ ಕಾಲಿಂಗ್ ಅಟೆನ್‌ಶನ್‌ನ್ನು ಚೇಂಜ್ ಮಾಡಬೇಕೆಂದರೋ ಆಗ ನಾನು ಚೇಂಜ್ ಮಾಡಿದ್ದೇನೆ. I have changed it under Rule 363.

ಅವರು ಕಾಲಿಂಗ್ ಅಟೆನ್‌ಶನ್ ಬೇಗನೆ ಬರುವುದಿಲ್ಲ. ಚೇಂಜ್ ಮಾಡಿಕೊಡಿ ಎಂದರು, I have got every power under Rule 363 and I have changed it.

ಶ್ರೀ ಜಗದೀಶ್ ಶೆಟ್ಟರ್:- ಇದು ಬಹಳ ಸೆನ್ಸಿಟಿವ್ ಇಷ್ಯೂ. ಇದು ಪಾರ್ಲಿಮೆಂಟ್‌ನಲ್ಲಿ ನಡೆಯತಕ್ಕಂಥದ್ದು. ಇಲ್ಲಿ ನಾವು ಚರ್ಚೆ ಮಾಡಲು ಬರುವುದಿಲ್ಲ. ನಮ್ಮ ಬೇಸಿಕ್ ಅಬ್‌ಜೆಕ್ಷನ್ ಪಾರ್ಲಿಮೆಂಟ್‌ನಲ್ಲಿ ನಡೆಯಬೇಕಾದಂಥ ಚರ್ಚೆಯನ್ನು ಇಲ್ಲಿ ಮಾತನಾಡಲು ಬರುವುದಿಲ್ಲ ಎಂಬುದಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅದು ಇಲ್ಲಿ ಚರ್ಚೆ ಮಾಡಲು ಬರುತ್ತದೋ ಇಲ್ಲವೋ ಎಂಬ ಬಗ್ಗೆ ತಾವು ಆಮೇಲೆ ರೂಲಿಂಗ್ ಕೊಡಬಹುದು. ಸದಸ್ಯರು ಹೇಳುವುದನ್ನು ಕೇಳಲು ಆಗುವುದಿಲವೇ?

ಶ್ರೀ ಜಗದೀಶ್ ಶೆಟ್ಟರ್:- ತಾವುಗಳು ಏನು ಹೇಳುತ್ತೀರಿ ಎಂಬುದು ಗೊತ್ತಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹಾಗಾದರೆ ನಾವು ಇಲ್ಲಿ ಫ್ರೈಸ್‌ರೈಸ್ ಬಗ್ಗೆ ಮಾತನಾಡುವುದಿಲ್ಲವೇ? ಪೆಟ್ರೋಲ್ ಇರಬಹುದು, ಡೀಸೆಲ್ ಇರಬಹುದು, ಕೆರೋಸಿನ್ ಇರಬಹುದು, ಅದರ ಬಗ್ಗೆ ನಾವು ಇಲ್ಲಿ ಮಾತನಾಡುವ ಹಾಗೆ ಇಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- ಯಾರದ್ದಾದರೂ ಪೆಟ್ರೋಲ್ ಬಂಕ್ ಬಂದ್ ಆಗಿದೆಯೇ...

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಹೊಸ ಸಂಪ್ರದಾಯವನ್ನು....

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ನಮ್ಮ ಅನೇಕ ಸದಸ್ಯರು ವಿವಿಧ ರೀತಿಯಲ್ಲಿ ವಿವಿಧ ರೂಲ್ ಕೆಳಗಡೆ, ತಮಗೆ ನೋಟೀಸ್‌ನ್ನು ಕಳುಹಿಸಿ ಕೊಟ್ಟಿದ್ದಾರೆ. ಇದು ಪಬ್ಲಿಕ್ ಇಂಪಾರ್ಟೆನ್ಸ್ ವಿಚಾರ. ಇದು ಇಡೀ ರಾಷ್ಟ್ರವನ್ನು ಲೂಟಿ ಮಾಡಿದಂಥ ವಿಚಾರ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಏನು ಹೇಳುತ್ತಿದ್ದಾರೆ... ಏನು ಲೂಟಿ ಮಾಡಿದ್ದಾರೆ... ಹೇಳಲಿ ಅವರು... ಈ ರೀತಿಯಲ್ಲಿ ಅವರುಗಳು ಮಾತನಾಡಲು ಅಲೋ ಮಾಡಿದರೆ ತಮ್ಮ ಪೀಠಕ್ಕೆ ಗೌರವ ಸಿಗುವುದಿಲ್ಲ.... ಪಾರ್ಲಿಮೆಂಟ್‌ನಲ್ಲಿ ನಡೆಯುವಂಥ ಡಿಸ್‌ಕಷನ್ ಬಗ್ಗೆ ಇಲ್ಲಿ ಮಾತನಾಡಲು ಆಗುತ್ತದೆಯೇ?...

(ಗೊಂದಲ)

ಅಧ್ಯಕ್ಷರು:- ತಾವುಗಳು ಮಾತನಾಡುವಾಗ ಅವರುಗಳು ಸುಮ್ಮನೆ ಇದ್ದರು. ಈಗ ಅವರು ಮಾತನಾಡಲಿ, ಅವರಿಗೂ ಅವಕಾಶ ಕೊಡಿ... ಮಾನ್ಯ ಶಿವಕುಮಾರ್‌ರವರು ಈಗ ಮಾತನಾಡುತ್ತಾರೆ... ತಾವುಗಳು ಸುಮ್ಮನೆ ಇರಿ.

ಶ್ರೀ ಜಗದೀಶ್ ಶೆಟ್ಟರ್:- ಲೂಟಿ ಮಾಡಿದ್ದಾರೆ.... ಮುಂತಾಗಿ ಮಾತನಾಡುವುದಾದರೆ ಅವರಿಗೆ ಹೇಗೆ ಅವಕಾಶ ಸಿಕ್ಕುತ್ತದೆ?...

ಅಧ್ಯಕ್ಷರು:- ಅವರು ಏನು ಹೇಳುತ್ತಾರೆ ಕೋಳೋಣ, ಆಟ್‌ಲೀಸ್ಟ್. ಹಾಗಾದರೆ ಬೇಗೆ ಯಾರೂ ಮಾತನಾಡಲೇ ಬಾರದೇ? Except you people ಈ ಕಡೆಯವರು ಯಾರೂ ಮಾತನಾಡಲೇ ಬಾರದೇ?

ಶ್ರೀ ಜಗದೀಶ್ ಶೆಟ್ಟರ್:- ಯಾರು ಲೂಟಿ ಮಾಡಿದ್ದಾರೆ, ಏನು, ಎಂಬ ಬಗ್ಗೆ ತಮಗೆ ನೋಟೀಸ್ ಕೊಟ್ಟಿದ್ದಾರೆಯೇ?

(ಗೊಂದಲ)

ಅಧ್ಯಕ್ಷರು:- ಅವರು ಕೆರೋಸಿನ್ ಇಲ್ಲ ಎಂದು ಮಾತನಾಡುತ್ತಾರಂತೆ, ಅವರಿಗೆ ಮಾತನಾಡಲು ನೀವು ಬಿಡುತ್ತಾ ಇಲ್ಲವಲ್ಲಾ? ಅವರು ಮಾತನಾಡಿದರೆ ಏನು ಹೇಳುತ್ತಾರೆಂಬುದು ಗೊತ್ತಾಗುತ್ತದೆ. ಅವರು ಶಾಸಕರ ಬಗ್ಗೆ ಮಾತನಾಡಿದರೆ ನಾನೇ ಮಾತನಾಡಬೇಡಿ ಎಂದು ಹೇಳುತ್ತೇನೆ. ಕನ್‌ಸ್ಯೂಮರ್ಸ್‌ಗೆ ಏನಾದರೂ ತೊಂದರೆ ಯಾಗಿದ್ದರೆ ಅದನ್ನು ಅವರು ಮಾತನಾಡಬಹುದು. ಮಾನ್ಯ ರಾಮಯ್ಯನವರೇ, ಕನ್‌ಸ್ಯೂಮರ್‌ಗಳಿಗೆ ಏನಾದರೂ ತೊಂದರೆ ಇದ್ದರೆ ತಾವು ಮಾತನಾಡಿ. ಶಾಸಕರ ಬಗ್ಗೆ ಚಕಾರ ಎತ್ತುಬೇಡಿ. ಅವರ ನಾಯಕರ ಬಗ್ಗೆ ಚಕಾರ ಎತ್ತಕೂಡದು...

(ಗೊಂದಲ)

4.00 ಪಿಎಂ

ಶ್ರೀ ಡಿ.ಕೆ. ಶಿವಕುಮಾರ್:- ಅಧ್ಯಕ್ಷರೇ ನಾವು ಕಳೆದ 20 ದಿವಸಗಳಿಂದ ಅವರುಗಳು ಯಾವ್ಯಾವ ಮೋಷನ್ ಮೂವ್ ಮಾಡಿದ್ದಾರೆ, ಯಾವ್ಯಾವ ನೋಟಿಸ್ ಕೊಟ್ಟಿದ್ದಾರೆ ಅವೆಲ್ಲವನ್ನೂ ನಾವು ಶಾಂತರೀತಿಯಿಂದ ಕೇಳಿದ್ದೇವೆ. ಕೇಳಿ ಎಷ್ಟು ಬೈಯ್ಯಿಸಿಕೊಳ್ಳಬೇಕೋ ಅಷ್ಟು ಬೈಯ್ಯಿಸಿಕೊಂಡಿದ್ದೇವೆ. ಅವರು ಏನೇನು ಹೇಳಬೇಕೋ ಅದೆಲ್ಲವನ್ನೂ ಹೇಳಿದ್ದಾರೆ. ಅವರು ಮಾತನಾಡುವಾಗ ಯಾವಾಗಲೂ ನಾವು ಅಡ್ಡಿಪಡಿಸಿಲ್ಲ. ಇವತ್ತು ಇಡೀ ರಾಷ್ಟ್ರದಲ್ಲಿ ಈ ರಾಜ್ಯದ ಯುವಕರಾದ ಹರಿಜನ ಯುವಕರಿಗೆ ಆಗಿರುವ ದ್ರೋಹದ ವಿಚಾರದಲ್ಲಿ ನಾವೀಗ ಚರ್ಚೆ ಮಾಡಬೇಕಾದಂತಹ ವಿಚಾರವಿದೆ. ಹರಿಜನರ ಯುವಕರು, ವಿಧವೆಯರು ಮತ್ತು ಈ ರಾಜ್ಯದ ಯುವರು - ಇವರೆಲ್ಲರಿಗೂ ಕೂಡ ಇವರೇನು ಮೋಸ ಮಾಡಿದ್ದಾರೆ ಎಂಬ ಬಗ್ಗೆ....

(ಗೊಂದಲ)

ಈ ರಾಜ್ಯದ ಯುವಕರಿಗೆ ಒಂದು ಸುಳ್ಳು ಜಾಹಿರಾತನ್ನು ಕಣ್ಣು ನೆಪಕ್ಕೋಸ್ಕರ ಕೊಡಿಸಿ ಅವರ ಕೈಯಿಂದ ಸಾವಿರಾರು ರೂಗಳ ಅರ್ಜಿ ಹಾಕಿಸಿ....

ಶ್ರೀ ಜಗದೀಶ ಶೆಟ್ಟರ್:- ಆ ಜಾಹಿರಾತು ಕೊಡುವವರು ಯಾರು? ಅದಕ್ಕೆ ಇಲ್ಲಿ ಉತ್ತರ ಕೊಡುವವರು ಯಾರು? ಸಂಸತ್ತಿಗೆ ಹೋಗಿ ಇದೆಲ್ಲವನ್ನೂ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು:- Let him complete. ಅವರು ಮಾತನಾಡಲು ನೀವು ಅಲೋನೇ ಮಾಡುತ್ತಿಲ್ಲವಲ್ಲ. I will not allow. ಕನಸ್ಯೂಮರ್ಸ್‌ಗೆ ಕೆರೋಸಿನ್, ಪೆಟ್ರೋಲ್‌ಗಳಲ್ಲಿ ತೊಂದರೆಯಾಗಿದೆಯೆಂದು ಅವರು ಹೇಳುತ್ತಿರುವುದು.

(ಗೊಂದಲ)

I am very sorry, do not talk like that. ನೀವು ಅಲ್ಲಿ ನಿಂತುಕೊಂಡು ಮಾತನಾಡಬೇಡಿ. ಅವರಿಗೆ ಮಾತನಾಡುವ ಹಕ್ಕಿದೆ. let him talk. ನಮಗೂ ಗೊತ್ತಿದೆ ಮಾತನಾಡುವುದು, ನಿಮಗೊಬ್ಬರಿಗೇ ಅಲ್ಲ ಗೊತ್ತಿರುವುದು.

(ಗೊಂದಲ)

ಅವರು ಮಾತನಾಡಲು ನೀವು ಬಿಡುತ್ತಿಲ್ಲವಲ್ಲ. This is unfair. I am very sorry.

(ಗೊಂದಲ)

ನಿಮಗೆ ಮಾತನಾಡಲು ಬಿಡುತ್ತಿಲ್ಲವ? ಹಾಗೇ let him talk for three minutes. ಅವರು ನಿಮ್ಮ ಬಗ್ಗೆ ಮಾತನಾಡುವುದಿಲ್ಲ. ಕೆರೋಸಿನ್ ಉಪಯೋಗ ಮಾಡುವುದಿಲ್ಲವೇ ಕನ್‌ಸ್ಯೂಮರ್ಸ್? ಮಾತನಾಡಲು ಬಿಡದಿದ್ದರೆ ರ್‍ಯಾನ್‌ಸಂ ಅಷ್ಟೇ. ಮಾತನಾಡಲು ಬಿಡಿ ಅವರಿಗೆ. ಮಾತನಾಡಲು ಬಿಡದಿದ್ದರೆ this is not democratic way. ಮೂರು ವರ್ಷದಿಂದ ನಿಮಗೆ ಅಲೋ ಮಾಡುತ್ತಿದ್ದೇನಲ್ಲ ಆಗ ಸರಿಯಾಗಿತ್ತು. ಈಗ ರೂಲ್ಸ್ ಪ್ರಕಾರ ನಾನು ಹೋಗುತ್ತೇನೆಂದರೆ ನಿಮಗೆ ಬೇಡ.

ಶ್ರೀ ಜಗದೀಶ್ ಶೆಟ್ಟರ್:- ನಮ್ಮನ್ನೆಲ್ಲ ಹೊರಗಡೆ ಹಾಕಿ.

ಅಧ್ಯಕ್ಷರು:- ಅವೆಲ್ಲಾ ಬೇಡಿ. I donot like to send them out. ಮಾನ್ಯ ಶಿವಕುಮಾರ್‌ರವರೇ ತಾವು ಮಾತನಾಡಿ. Let him talk for one minute.

(ಗೊಂದಲ - ಕೂಗಾಟ)

ಶ್ರೀ ಡಿ.ಕೆ. ಶಿವಕುಮಾರ್: ನಮ್ಮ ಸ್ನೇಹಿತರು ಏನು ಹೇಳಿದರೂ ನಾವು ಕೇಳಲು ತಯಾರಿದ್ದೇವೆ. ನಾವೇನು ನೋಟೀಸನ್ನು ಕೊಟ್ಟಿದ್ದೇವೆ, ಎರಡು-ಮೂರರಲ್ಲಿ ನಾವು ನೋಟೀಸನ್ನು ಕೊಟ್ಟಿದ್ದೇವೆ. ತಾವು ನಿಯಮ 363ನ್ನು ಕೋಟ್ ಮಾಡಿ ನಮಗೆ ಅನುಮತಿಯನ್ನು ಕೊಟ್ಟಿದ್ದೀರಿ.

(ಗೊಂದಲ)

ಅಧ್ಯಕ್ಷರು:- ಒಂದು ನಿಮಿಷ ತಡೆಯಿರಿ. ಅವರು ಮಾತನಾಡಕೂಡದೇ? ನೀವು ಮಾತನಾಡಬಹುದು. ಅವರು ಮಾತನಾಡಕೂಡದೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ನೀಲಕಂಠಪ್ಪನವರಿಗೆ ನಿಯಮ 69, ರಾಮಯ್ಯನವರಿಗೆ ಕಾಲಿಂಗ್ ಅಟೆನ್‌ಷನ್. ಈಗ ಮತ್ತೊಂದು ಯಾವುದೋ ಗೊತ್ತಿಲ್ಲ. ನನಗೇನೂ ಅರ್ಥವಾಗುತ್ತಿಲ್ಲ. ಮೂರು ರೂಲಿಂಗ್ಸ್ ಮೂರು ನಿರ್ಣಯಗಳು.

ಶ್ರೀ ಡಿ.ಕೆ. ಶಿವಕುಮಾರ್:- ಸನ್ಮಾನ್ಯ ಅಧ್ಯಕ್ಷರೇ, ಇದು ವಿರೋಧಪಕ್ಷದವರು ತಾವು ಮಾಡಿರುವಂಥ ಈ ದೇಶದ್ರೋಹವನ್ನು, ದೇಶವನ್ನು ಲೂಟಿ ಮಾಡಿರುವಂಥ ವಿಚಾರವನ್ನು ಮುಚ್ಚಿಕೊಳ್ಳುವುದಕ್ಕೆ ಏನು ಪ್ರಯತ್ನವನ್ನು ಮಾಡುತ್ತಿದ್ದಾರೆ, ಅದನ್ನು ಆ ವಿಚಾರವನ್ನು ನಾವು ತಿಳಿಸಬೇಕಾಗುತ್ತದೆ. ಅವರು ಈ ದೇಶವನ್ನು ಯಾವ ರೀತಿ ಲೂಟಿ ಮಾಡುತ್ತಿದ್ದಾರೆ, ಅದನ್ನು ನಾವು ಈ ಸದನದ ಮುಖಾಂತರ ಈ ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ. ದಯವಿಟ್ಟು ತಾವು ಎಲ್ಲಾ ಸದಸ್ಯರುಗಳಿಗೂ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ನೀವು ಈಗ ಮಾನ್ಯ ರಾಮಯ್ಯನವರನ್ನು ಕರೆದಿದ್ದೀರಿ. ಬೇರೆಯವರು ಭಾಷಣ ಮಾಡುವಾಗ ಯಾವತ್ತೂ ಮಾನ್ಯ ರಾಯ್ಯನವರು ಮಧ್ಯೆ ಎದ್ದು ಹೋಗಿಲ್ಲ. ನೀವುಗಳು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಅದನ್ನು ಕೇಳಬೇಕಾಗುತ್ತದೆ. ದಯವಿಟ್ಟು ತಾವು ಅದಕ್ಕೆ ರೂಲಿಂಗ್‌ನ್ನು ಕೊಟ್ಟು ಅವರು ಭಾಷಣ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಬೇರೆ ಬಿಸಿನೆಸ್ಸ್‌ನ್ನು ತೆಗೆದುಕೊಂಡರೆ ನಾವು ಹೋಗುತ್ತೇವೆ. ಈಗ ಕ್ವೊಶ್ಚನ್ ಅವರ್‌ನ್ನು ಸ್ಟಾರ್ಟ್ ಮಾಡಿ. ಬಿಲ್‌ನ್ನು ತೆಗೆದುಕೊಳ್ಳಿ. ನಾವು ಮಾತನಾಡುವುದಕ್ಕೆ ತಯಾರಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಬಿಲ್ಸ್ ತೆಗೆದುಕೊಳ್ಳಿ. ಬಿಲ್ಸ್ ಡಿಸ್ಕಷನ್‌ನ್ನು ಚಾಲೂ ಮಾಡೋಣ. ಇನ್ನು ಬಹಳ ಮಹತ್ವದ ಬಿಲ್‌ಗಳು ಇದ್ದಾವೆ. ಇನ್ನು 20-30 ಬಿಲ್‌ಗಳು ಇದ್ದಾವೆ. ಪಾಸಾಗಬೇಕಾಗಿದೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೇ, ಈ ಒಳ್ಳೆಯ ಗುಣ ನಿನ್ನೆ ಏಕೆ ಬರಲಿಲ್ಲ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ರೂಲಿಂಗ್ ಪಾರ್ಟಿಯಾಗಿ ಸದನದಲ್ಲಿ ಕಾರ್ಯಕಲಾಪಗಳಿಗೆ ತಡೆ ಮಾಡಿದಂಥವರು ಇವತ್ತು ಕಾಂಗ್ರೆಸ್‌ನವರು.

(ಗೊಂದಲ)

ಶ್ರೀ ಎಂ.ಎಸ್.ಆತ್ಮಾನಂದ:- ಮಾನ್ಯ ಅಧ್ಯಕ್ಷರೇ, ಮಾನ್ಯ ವೈ.ಕೆ. ರಾಮಯ್ಯನವರನ್ನು ಕರೆಯಿರಿ. ತಾವು ಪರ್ಮಿಟ್ ಮಾಡಿದ್ದೀರಿ.

ಶ್ರೀ ಕರಿಯಣ್ಣ:- ಕಾಂಗ್ರೆಸ್‌ನವರು ಮಾತನಾಡುತ್ತಾರೆಂದರೆ ಬಿಜೆಪಿಯವರಿಗೆ ಇಷ್ಟೊಂದು ಹೆದರಿಕೆ ಯಾಕೆ?

(ಗೊಂದಲ)

ಶ್ರೀ ಕುಮಾರ್ ಬಂಗಾರಪ್ಪ:- ಮಾನ್ಯ ಅಧ್ಯಕ್ಷರೇ ಮಾಡಿರುವ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಬಂದು ನಿಂತಿದ್ದಾರೆ ಅಷ್ಟೇನೆ, ಬೇರೆ ಇನ್ನೇನೂ ಇಲ್ಲ.

(ಗೊಂದಲ)

ಅಧ್ಯಕ್ಷರು:- ಚೇರ್ ಬಗ್ಗೆ ಅವಹೇಳನ ಏನು ಮಾಡಿದ್ದಾರೆ, ಅದನ್ನೆಲ್ಲಾ ರಿಮೂವ್ ಮಾಡಿದ್ದೇನೆ ಈಗ 15 ನಿಮಿಷ ಅಡ್ಜರ್ನ್ ಮಾಡೋಣ. ಮತ್ತೆ ಸೇರೋಣ. ಸದನವು 4-13ಕ್ಕೆ ಮುಂದೂಡಲ್ಪಟ್ಟು ಮತ್ತೆ 15 ನಿಮಿಷದ ನಂತರ ಪುನಃ ಸಮಾವೇಶಗೊಳ್ಳಲು ನಿರ್ಧರಿಸಿತು.

(ಸದನವು ಪುನಃ 4.50 ನಿಮಿಷಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

(ಬಿ.ಜೆ.ಪಿ. ಸದಸ್ಯರಿಂದ ಬಾವಿಯಲ್ಲಿ ಧರಣಿ)

ಅಧ್ಯಕ್ಷರು:- ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಡಿ.ಕೆ.ಶಿವಕುಮಾರ್:- ಜಗದೀಶ್ ಶೆಟ್ಟರ್‌ರವರು ಇದರ ಬಗ್ಗೆ ಅವರೇ ಚರ್ಚೆ ಪ್ರಾರಂಭ ಮಾಡಲಿ. ಇದನ್ನು ಯಾವ ರೂಲ್‌ನಲ್ಲಿ ತೆಗೆದುಕೊಳ್ಳಬೇಕೆಂದು ಅವರೇ ಹೇಳಲಿ. ನಾವು ಕೇಳುವುದಕ್ಕೆ ತಯಾರಿದ್ದೇವೆ. ನೀವು ಏನು ಹೇಳಬೇಕೆಂದು ಇದ್ದೀರಿ ಅದನ್ನು ನಾವು ಕೇಳುವುದಕ್ಕೆ ತಯಾರಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ನಾವು ಒಂದು ಸಬ್ಮಿಷನ್ ಮಾಡುತ್ತೇವೆ.

ಅಧ್ಯಕ್ಷರು:- ನೀವು ಸಬ್ಮಿಷನ್ ಮಾಡುವಾಗ ಅವರು ಸುಮ್ಮನೆ ಕುಳಿತಿದ್ದರು. ಅವರು ಸಬ್ಮಿಷನ್ ಮಾಡುವಾಗ ತಾವು ಸುಮ್ಮನೆ ಇರಬೇಕು. ಅದು ನನ್ನ ಮನವಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಒಂದೇ ಅಧಿವೇಶನದಲ್ಲಿ ಎರಡು, ಎರಡು ರೂಲಿಂಗ್ ಆಗಬಾರದು ಎಂಬುದು ನನ್ನ ಅಭಿಪ್ರಾಯ. ನಾನು ಮಾನ್ಯ ಜಯಪ್ರಕಾಶ್ ಹೆಗಡೆಯವರು ಮತ್ತಿತರರು ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ಕಾರ್ಪೊರೇಷನ್ ಬಗ್ಗೆ ಒಂದು ವಿಷಯ ಪ್ರಸ್ತಾಪ ಮಾಡಿದೆವು. ನಿಯಮ 69ರಲ್ಲಿ ಕೊಟ್ಟಿವು, ಗಮನ ಸೆಳೆಯುವ ಸೂಚನೆಯಡಿಯಲ್ಲಿ ಕೊಟ್ಟಿವು, ಶೂನ್ಯ ವೇಳೆಯಲ್ಲಿ ಕೊಟ್ಟಿವು. ಶೂನ್ಯ ವೇಳೆಯಲ್ಲಿ ಮಾನ್ಯ ಬಿಜೆಪಿ ಸ್ನೇಹಿತರು ಪ್ರಸ್ತಾಪ ಮಾಡುತ್ತಿದ್ದರು. ಆಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದ ಚಂದ್ರೇಗೌಡರು ಇದನ್ನು ಪರಿಶೀಲಿಸುತ್ತೇವೆ; (ಗೊಂದಲ) I am not disputing anybody. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳಿದರು, ಇದು ಕಂಪನಿ ಆಕ್ಟ್ ಕೆಳಗಡೆ ಬರುತ್ತದೆ, ಇದಕ್ಕೆ

ಯಾವ ರೀತಿ ಉತ್ತರ ಹೇಳಬೇಕೆಂದು ಕೇಳಿದಾಗ ನಾವು ಒಂದು ಪ್ರಶ್ನೆ ಎತ್ತಿದ್ದೆವು. 40,000 ಜನ 360 ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡಿ ಕರ್ನಾಟಕ ರಾಜ್ಯದ ಜನ ಇವತ್ತು ತೊಂದರೆ ಪಡುತ್ತಿದ್ದಾರೆ. ಸೆಕ್ಷನ್ 420 ಕೇಸ್ ಆದರೂ ನೀವು ರಿಜಿಸ್ಟರ್ ಮಾಡಿಕೊಂಡು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂಬ ಮಾದ ಇಟ್ಟೆವು. ಆಗ ಅವರು ಇದನ್ನು ನಾವು ಯೋಚನೆ ಮಾಡುತ್ತೇವೆಂದು ಹೇಳಿದಾಗ ತಾವು ರೂಲಿಂಗ್ ರಿಸರ್ವ್ ಮಾಡಿದಿರಿ.

ಅಧ್ಯಕ್ಷರು:- ನಾನು ರೂಲಿಂಗ್ ಕೊಟ್ಟಿಲ್ಲ. ತಾವು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ಎರಡೆರಡು ರೂಲಿಂಗ್ ಕೊಟ್ಟಿದ್ದೀರಿ ಎಂಬ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ರೂಲಿಂಗ್ ರಿಸರ್ವ್ ಆಗಿದೆ ಎಂದು ಹೇಳಿ. ಸರ್ಕಾರದಿಂದ ಇನ್ನು ಉತ್ತರ ಬಂದಿಲ್ಲ. ರೂಲಿಂಗ್ ಕೊಡಬೇಕಾದರೆ ಸರ್ಕಾರದ ಉತ್ತರ ಬಂದಿದೆಯಾ? ಆದ್ದರಿಂದ, ರೂಲಿಂಗ್ ರಿಸರ್ವ್ ಆಗಿದೆ ಎಂದು ಹೇಳಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಎರಡೆರಡು ರೂಲಿಂಗ್ ಕೊಟ್ಟಿದ್ದೀರಿ ಎಂದು ಹೇಳಿಲ್ಲ. ತಾವು ರೂಲಿಂಗ್ ಕೊಟ್ಟಿಲ್ಲ. ರೂಲಿಂಗ್ ರಿಸರ್ವ್ ಆಗಿದೆ.

ಅಧ್ಯಕ್ಷರು:- ಹಾಗೆ ಹೇಳಿ. ಆಗಬಾರದು ಎಂದು ಹೇಳಿ. I will agree. ರೂಲಿಂಗ್ ಕೊಟ್ಟಿದ್ದೇನೆ ಎಂದು ಹೇಳಬೇಡಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಆ ರೂಲಿಂಗ್ ರಿಸರ್ವ್ ಇದೆ. ತಾವು ಸಮಾಲೋಚನೆ ಮಾಡಿ ಇದರ ಬಗ್ಗೆ ಅಧ್ಯಯನ ಮಾಡಿ ರೂಲಿಂಗ್ ಕೊಡುತ್ತೇವೆಂದು ಹೇಳಿದಿರಿ. ಅದು ರಿಸರ್ವ್ ಇದೆ. ಅದು ಸೆಂಟ್ರಲ್ ಸಬ್ಜೆಕ್ಟ್. ಅದೇ ರೀತಿಯಲ್ಲಿ ಈ ಕೇಸ್ ಇದೆ. ನನ್ನ ಮನವಿ ಏನೆಂದರೆ, ನೀವು ಏನು ರೂಲಿಂಗ್ ಕೊಡುತ್ತೀರಿ ನನಗೆ ಗೊತ್ತಿಲ್ಲ. ಎರಡಕ್ಕೂ ಕೂಡ ಒಂದೇ ರೂಲಿಂಗ್ ಕೊಡಬೇಕೆಂಬುದು ನನ್ನ ಮನವಿ.

ಅಧ್ಯಕ್ಷರು:- ಆಯಿತು ಕೊಡೋಣ.

ಶ್ರೀ ಡಿ.ಕೆ.ಶಿವಕುಮಾರ್:- ದಯವಿಟ್ಟು ಅವರು ಏನು ಬೇಕಾದರೂ ಹೇಳಲಿ, ಅವರವರ ಜಾಗಕ್ಕೆ ಹೋಗಿ ಬಳಿಕ ಅವರು ಸ್ವಲ್ಪ ಕೇಳಿ, ಅವರು ಹೇಳಿದ್ದೆಲ್ಲಾ ನಾವು ಕೇಳುವುದಕ್ಕೆ ನಾವು ತಯಾರಿದ್ದೇವೆ. ಕಳೆದ ಮೂರು ವರ್ಷಗಳಲ್ಲಿ ನಾವು ಕೇಳಿದ್ದೇವೆ. ನಾವು ಇಲ್ಲವೆಂದು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಅವರಿಗೆ ಏನೇನು ಬೇಕೋ ಆ ಎಲ್ಲಾ ಸಹಕಾರವನ್ನು ಕೊಟ್ಟಿದ್ದೀರಿ. ವಿರೋಧ ಪಕ್ಷದವರಿಗೆ ಏನು ಸಹಕಾರ ಕೊಡಬೇಕು ನಾವು ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ನೀವು ಒಂದು ತೀರ್ಮಾನಕ್ಕೆ ಬಂದು ಕೊನೆಗೆ ಏನೋ ಒಂದು ವಿಚಾರ ಮಂಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಈ ರಾಜ್ಯದ ಜನತೆಗೆ ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಒಂದು ಅವಕಾಶ ಕೊಟ್ಟಾಗ ಅದನ್ನು ಕೇಳುವುದಕ್ಕೆ ವಿರೋಧ ಪಕ್ಷದ ಸದಸ್ಯರಿಗೆ ಸಹನೆ ಇಲ್ಲವೆಂದು ಹೇಳಿದರೆ, ಇದು ಏನು ಇವರ ಮನೆ ಆಸ್ತಿನಾ?

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ:- ಜನತಾಪರಿವಾರದವರು ಇದರಲ್ಲಿ ಭಾಗಿ ಆಲ್ಲ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್:- ನಾನು ಬಿಜೆಪಿಗೆ ಹೇಳಿದ್ದು. ತಾವು ದಯಮಾಡಿ ಮಾನ್ಯ ವೈ.ಕೆ. ರಾಮಯ್ಯನವರಿಗೆ ಕರೆದಿದ್ದೀರಿ, ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಬಾವಿಯಲ್ಲಿ ಕುಳಿತುಕೊಳ್ಳಲಿ ನಮ್ಮದು ಏನು ಅಭ್ಯಂತರವಿಲ್ಲ. ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:- ಅವರು ಮಾತನಾಡುವಾಗ, ನೀವು ಸುಮ್ಮನೆ ಕೂರುವುದಾದರೆ ನಾನು ಸಮಯ ಕೊಡುತ್ತೇನೆ. ಅವರು ಮಾತನಾಡುವಾಗ ನೀವು ಗಲಾಟೆ ಮಾಡುವುದಾದರೆ ಇದು ಯಾವ ನ್ಯಾಯ ಹೇಳಿ. ಅವರು ಮಾತನಾಡುವಾಗ ನೀವೆಲ್ಲರೂ ಸೇರಿ ಗಲಾಟೆ ಮಾಡುತ್ತೀರಿ. ನೀವು ಮಾತನಾಡುವಾಗ ಅವರು ಸುಮ್ಮನೆ ಇರಬೇಕು. ಇದು ಯಾವ ನ್ಯಾಯ? ಶೇಕಡ 88 ಭಾಗ ಒಂದು ಕಡೆ ಇದ್ದು ಅವರು ಮಾತನಾಡಬೇಕೆಂದು ಹೇಳಿದರೆ, ಅವರಿಗೆ ಅಲೋ ಮಾಡದೆ ಇದ್ದರೆ ಇದು ಯಾವ ನ್ಯಾಯ? I cannot understand. ನೀವು ಹೇಳಿದ್ದೆಲ್ಲಾ ಅವರು ಕೇಳಬೇಕು, ಅವರು ಹೇಳುವುದನ್ನು ನೀವು ಕೇಳಕೂಡದೇ? ಪಾರ್ಲಿಮೆಂಟ್ ವಿಷಯ ಅಲ್ಲ, ಇಲ್ಲಿರುವ ಕನ್‌ಸ್ಯೂಮರ್ಸ್ ವಿಷಯ. ಆದರೆ ಕೆರೋಸಿನ್ ಪೆಟ್ರೋಲ್ ಸಿಗುವುದಿಲ್ಲವೆಂದು ಅವರು ಹೇಳುವುದು ಅಷ್ಟೆ. ನಿಮ್ಮ ಶಾಸಕರ ಹೆಸರನ್ನು ಎತ್ತುವುದಿಲ್ಲ. ನೀವು ಅವರು ಮಾತನಾಡುವುದಕ್ಕೆ ಗಲಾಟೆ ಮಾಡದೆ ಸುಮ್ಮನೆ ಕುಳಿಕುಕೊಳ್ಳುತ್ತೀರಾ ಹೇಗೆ? ತಾವು ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುತ್ತೀರೋ ಹೇಗೆ? That I want to know. Few people cannot stall the entire House. ಅರ್ಥವಾಯಿತೇ?

ಶ್ರೀ ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಸದನದ ಸಮಯ ಬಹಳ ತೀವ್ರಗತಿಯಲ್ಲಿ ದುರುಪಯೋಗವಾಗುತ್ತಿದೆ. ದಯಮಾಡಿ ನೀವು ಇದರ ಬಗ್ಗೆ ಸೂಚನೆ ಕೊಡಬೇಕು. ಏಕೆಂದರೆ ಬಹಳ ತೀವ್ರಗತಿಯಲ್ಲಿ ದುರುಪಯೋಗವಾಗುತ್ತಿದೆ. ಸರ್ಕಾರದ ಕಾರ್ಯಕ್ರಮಗಳನ್ನು ನಡೆಸಲು ಬಿಡದೇ ಸ್ವಾರ್ಥ ರಾಜಕಾರಣ ಮಾಡತಕ್ಕಂಥ ಪ್ರಯತ್ನ ಈಗ ನಡೆಯುತ್ತಾ ಇದೆ. ದಯಮಾಡಿ ಇದರ ಬಗ್ಗೆ ತಾವು ನಿರ್ಣಯ ಕೊಡಬೇಕು.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ತಿಳುವಳಿಕೆ ಇರತಕ್ಕಂಥವರು ಮೇಲಾಗಿ ತಾವು ರೂಲಿಂಗ್ ಕೊಟ್ಟು ಇದರ ಪ್ರಕಾರ ಮಾಡಬಹುದು ಎನ್ನುವುದನ್ನು ಹೇಳಿದರೂ ಕೂಡ ನಿಮ್ಮದು ಸರಿಯಿಲ್ಲ ಎಂದು ನಿಮ್ಮ ಅಥಾರಟಿಯನ್ನೇ ಪ್ರಶ್ನೆ ಮಾಡುವುದಾದರೆ ಇವರು ವಿರೋಧ ಪಕ್ಷದ ನಾಯಕರಾಗಿ ಇರಬಹುದೇ? ವಿರೋಧ ಪಕ್ಷದ ನಾಯಕರ ಸ್ಥಾನವನ್ನು ಉಳಿಸಿಕೊಳ್ಳುತ್ತಾರೆಯೇ ಇವರು? ಇನ್ನು ನಾಳೆ ದಿವಸ ಇವರ ಕೈಗೆ ಸರ್ಕಾರ ಕೊಟ್ಟರೆ ಏನಾಗಬೇಕು ಹೇಳಿ? ಶೇಮ್ ಅಲ್ಲವೇ ಇದು? ಇವರಿಗೆ ಏನು ತೊಂದರೆಯಾಗಿದೆ ಸ್ವಾಮಿ? ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡಿದರೆ ಇವರಿಗೆ ಆಗುವ ತೊಂದರೆಯಾದರೂ ಏನು?

ಅಧ್ಯಕ್ಷರು:- ನಿನ್ನೆ ನೀವು ಮಾತನಾಡುವಾಗ ಅವೆಲ್ಲಾ ಸುಮ್ಮನೆ ಇದ್ದರಲ್ಲವೇ? ಎರಡೂರು ಗಂಟೆ ಮಾತನಾಡಿದಾಗ ಅವೆಲ್ಲಾ ಸುಮ್ಮೆ ಇದ್ದರು. ಆದಕಾರಣ ಶೇಕಡ 88 ಭಾಗ ಇರತಕ್ಕಂಥ ಶಾಸಕರ ಕಡೆಯಿಂದ ಅವರೇನೋ ಮಾತನಾಡಬೇಕು ಎಂದು ಕೇಳಿದ್ದಾರೆ. ಧರಣಿಯಲ್ಲಿರುವವರು ಒಪ್ಪುತ್ತೀರೋ ಅಥವಾ ಇಲ್ಲವೋ ಗೊತ್ತಿಲ್ಲ. ಇದೆ ಪ್ರಜಾಪ್ರಭುತ್ವ, ಇಲ್ಲಿ ನಮಗೆ ಮಾತನಾಡಲು ಹಕ್ಕು ಇದೆ, ನೀವುಗಳು ಎಲೆಕ್ಟ್ ಆಗಿ ಬಂದಿರುವ ಹಾಗೆ ನಾವು ಕೂಡ ಎಲೆಕ್ಟ್ ಆಗಿಯೇ ಬಂದಿದ್ದೇವೆ, ನಾವು ಮಾತನಾಡಲೇಬೇಕು ಎಂದು ಅವರು ಕೇಳುತ್ತಿದ್ದಾರೆ. ಅವರು ಮಾತನಾಡುತ್ತಾರೆ. ತಾವೆಲ್ಲರೂ ದಯವಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ. That is all I want.

(ಧರಣಿನಿರತ ಬಿ.ಜೆ.ಪಿ. ಸದಸ್ಯರು ಯಾರೂ ಬಾವಿಯಿಂದ ನಿರ್ಗಮಿಸಲಿಲ್ಲ)

ಅಧ್ಯಕ್ಷರು:- ಅವರಿಗೆ ನೀವು ಮಾತನಾಡುವುದಕ್ಕೆ ಬಿಡುತ್ತೀರೋ, ಇಲ್ಲವೋ?

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ, ಅವರು ಆ ಗುಂಡಿನಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾರೆ, ಅವರ ಜೊತೆ ನೀವೇಕೆ ಮಾತನಾಡುತ್ತೀರಿ?

Mr. Speaker:- This is democracy. ಅವರೂ ನಿಮ್ಮಹಾಗೆ ಚುನಾಯಿತರಾಗಿ ಬಂದಿದ್ದಾರೆ. ಅವರಿಗೆ ಕಾನೂನಿನ ಪ್ರಕಾರ ಮಾತನಾಡಲು ನಾನು ಅಲೋ ಮಾಡುತ್ತಾ ಇದ್ದೇನೆ. ರೂಲ್ಸ್ ಪ್ರಕಾರ ಅಲೋ ಮಾಡುತ್ತಾ ಇದ್ದೇನೆ. I am allowing them under Rule 363. ಮಾನ್ಯ ರಾಮಯ್ಯನವರೇ, ತಾವು ಮಾತನಾಡಿ.

(ಗೊಂದಲ)

Mr. Speaker:- I have got discretionary powers under rule 363. ಇದು ಡೆಮಾಕ್ರಸಿ, ಪ್ರಜಾಪ್ರಭುತ್ವ ಇದು, ಈ ರೀತಿ ಮಾಡುವುದು ತಪ್ಪು, ಭಾರಿ ಅನ್ಯಾಯ ಇದು. ಇದಕ್ಕಿಂತ ಅನ್ಯಾಯ ಯಾವುದೂ ಇಲ್ಲ.

(ಗೊಂದಲ)

ಅಧ್ಯಕ್ಷರು:- ಪ್ರಜಾಪ್ರಭುತ್ವದಲ್ಲಿ ಅರ್ಥ ಏನಿದೆ ಇದಕ್ಕೆ?

ಪ್ರಜಾಪ್ರಭುತ್ವ, ಡೆಮಾಕ್ರಸಿ. ಹೀಗಿರುವಾಗ ಅವರು ಮಾತನಾಡಲೇಬಾರದು ಎಂದರೆ ಏನಿದರ ಅರ್ಥ? ಮಾನ್ಯ ರಾಮಯ್ಯನವರೇ? ನೀವು ಮಾತನಾಡಿ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ (ಹುಲಿಯೂರು ದುರ್ಗ):- ಸನ್ಮಾನ್ಯ ಅಧ್ಯಕ್ಷರೆ, ರಾಷ್ಟ್ರದಲ್ಲಿ ಪೆಟ್ರೋಲ್ ಬಂಕ್‌ಗಳ ಮಾಲೀಕರು ತಮ್ಮ ಪೆಟ್ರೋಲ್ ಬಂಕ್‌ಗಳನ್ನು ಕ್ಲೋಸ್ ಮಾಡಿ ಪೆಟ್ರೋಲ್ ವಿತರಣೆಯನ್ನು ನಿಲ್ಲಿಸಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಪೆಟ್ರೋಲ್ ಬಂಕ್‌ಗಳನ್ನು ನಿಲ್ಲಿಸುವ ಮೂಲಕ ಸಾರ್ವಜನಿಕರಿಗೆ ಆಗುವಂಥ ತೊಂದರೆಗಳನ್ನು ನಿವಾರಿಸುವುದಕ್ಕೆ ರಾಜ್ಯ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎನ್ನುವ ವಿಷಯದಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಲೋಕಸಭೆಯಲ್ಲಿ ಏನು ನಡೆಯುತ್ತದೆ ಎನ್ನುವುದು ನನಗೆ ಪ್ರಸ್ತುತವಲ್ಲ. ಕೇಂದ್ರ ಸರ್ಕಾರ ಏನು ಮಾಡುತ್ತದೆ ಎನ್ನುವುದು ನನಗೆ ಪ್ರಸ್ತುತವಲ್ಲ. ಆದರೆ ಪೆಟ್ರೋಲ್ ಬಂಕ್‌ಗಳನ್ನು ಮುಚ್ಚುವುದರಿಂದ...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಪಾರ್ಲಿಮೆಂಟಿನಲ್ಲಿ ನಡೆಯುವುಂಥ ವಿಷಯಕ್ಕೆ ಇಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ. ಸಬ್‌ಜ್ಯುಡೀಸ್ ಆಗುತ್ತದೆ. ಹಕ್ಕುಚ್ಯುತಿ ಆಗುತ್ತದೆ. ಇದು ಪಾರ್ಲಿಮೆಂಟಿನಲ್ಲಿ ನಡೆಯುವ ವಿಷಯ. ಇಲ್ಲಿ ಮಾತನಾಡಿದರೆ ಇದಕ್ಕೆ ಉತ್ತರ ಯಾರು ಕೊಡಬೇಕು? ಮಾನ್ಯ ರಾಮಯ್ಯನವರ ಪ್ರಶ್ನೆಗೆ ಉತ್ತರ ಯಾರು ಕೊಡಬೇಕು?

(ಗೊಂದಲ)

ಅಧ್ಯಕ್ಷರು:- ಪ್ರಜಾಪ್ರಭುತ್ವದಲ್ಲಿ ಈ ರೀತಿ ನಡೆಯುತ್ತಿರುವುದು ಬಹಳ ಅನ್ಯಾಯ. ಅವರೂ ನಿಮ್ಮಹಾಗೆ ಚುನಾಯಿತರಾಗಿ ಬಂದಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಬಿಡದಿದ್ದರೆ ಹೇಗೆ? ಇದು ಯಾವ ನ್ಯಾಯ? Let them talk. ಅವರು ಮಾತನಾಡಿದ ಮೇಲೆ ಯಾರು ಬೇಕಾದರೂ ಮಾತನಾಡಿ. ಉತ್ತರ ಇದ್ದರೆ ಹೇಳಲಿ, ಇಲ್ಲದಿದ್ದರೆ ಸುಮ್ಮನಿರಲಿ, ಬೆಳಿಗ್ಗೆಯಿಂದ

ಅವರಿಗೆ ಮಾತನಾಡಲು ಅವಕಾಶ ಕೊಡಲು ಪ್ರಯತ್ನ ಪಡುತ್ತಿದ್ದೇನೆ. ಎರಡು ನಿಮಿಷದಲ್ಲಿ ಮುಗಿದುಹೋಗುತ್ತದೆ. ..... ಮಾತನಾಡುವುದಕ್ಕೆ ಬಿಡದಿದ್ದರೆ ಹೇಗೆ? ಅವರಿಗೇನು ಮಾತನಾಡುವುದಕ್ಕೆ ಹಕ್ಕಿಲ್ಲವೆ?

(ಗೊಂದಲ)

ಶ್ರೀ ಪಿ.ಬಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಇಲ್ಲಿ ತಾವು ವಿರೋಧ ಪಕ್ಷಗಳು ಎಂದು ಹೇಳತಕ್ಕಂಥ ಸಂದರ್ಭದಲ್ಲಿ ನಾವೂ ಸಹಿತ ಒಂದು ರಾಷ್ಟ್ರೀಯ ಪಕ್ಷದವರಾಗಿದ್ದೇವೆ. ನಾವು ಇಪ್ಪತ್ತು ಸದಸ್ಯರುಗಳಿದ್ದೇವೆ. ಈ ರೀತಿಯ ನಡವಳಿಕೆಗಳಿಗೆ ನೇರವಾಗಿ ಸಭಾನಾಯಕರೇ ಕಾರಣ. ಇದನ್ನು ವಿರೋಧ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಜನತಾದಳ (ಯು) ಸದಸ್ಯರುಗಳು ಸದನದಿಂದ ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು:- ನಾನು ಕೊನೆಯದಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಜಾಪ್ರಭುತ್ವದಲ್ಲೆ ಅವರೂ ನಿಮ್ಮ ಹಾಗೆ ಎಲೆಕ್ಟ್ ಆಗಿ ಬಂದಿದ್ದಾರೆ. ಅವರಿಗೆ ಮಾತನಾಡುವುದಕ್ಕಾದರೂ ಅವಕಾಶ ಮಾಡಿಕೊಡಿ. ನಾನು ಅಲೋ ಮಾಡಿದ್ದೇನೆ. I have allowed them under Rule 363. I have got every power under rule 363. ಕೆಲವು ಸದಸ್ಯರು ಈ ರೀತಿ ಮಾಡಿದರೆ....

(ಗೊಂದಲ)

ಅಧ್ಯಕ್ಷರು:- ಪ್ರಜಾಪ್ರಭುತ್ವದಲ್ಲಿ ನೀವು ಎಲೆಕ್ಟ್ ಆದಹಾಗೆ ಅವರು ಎಲೆಕ್ಟ್ ಆಗಿದ್ದಾರೆ. ಈ ರೀತಿ ಅಡ್ಡಿಪಡಿಸುವುದು ತಪ್ಪು. ನೀವು ಎಲ್ಲಿಯವರೆಗೆ ಅಲೋ ಮಾಡುವುದಿಲ್ಲವೋ ಅಲ್ಲಿಯವರಿಗೆ ನಾನು ಇಲ್ಲಿ ಹೌಸ್ ನಡೆಸುವುದಕ್ಕೆ ಆಗುವುದಿಲ್ಲ. ಕೆಲವು ಸದಸ್ಯರು ಈ ರೀತಿ ಅಡ್ಡಿಪಡಿಸುವುದರಿಂದ ನಾನು ಈಗ ಹೌಸ್ ಅನ್ನು ನಾಳೆ ಬೆಳಿಗ್ಗೆ 10 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 5.11ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿ: 8.8.02ರಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

4. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ತಡೆಹಿಡಿಯಲಾದ ಪ್ರಶ್ನೋತ್ತರಗಳು

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ನಾಗರಹಾಲ್ ಕೆರೆಗೆ ಪೋಷಕ ನಾಲ ನಿರ್ಮಿಸುವುದು

153(1205) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ನಿಧಿಘಟ್ಟದ ಬಳಿಯಿರುವ ಹಿರೇಕೊಟ್ಟು ಒಡ್ಡ ಕೆರೆಯಿಂದ ನಾಗರಹಾಲ್ ಕೆರೆಗೆ ನಾಲೆ ನಿರ್ಮಿಸುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೇ?

ಆ) ಹಾಗಿದ್ದಲ್ಲಿ, ಈ ಪೋಷಕ ನಾಲೆ ಯಾವಾಗ ನಿರ್ಮಿಸಲಾಗುವುದು ಮತ್ತು ಇದರ ಅಂದಾಜು ವೆಚ್ಚವೆಷ್ಟು?